ಬ್ರಹ್ಮರ್ಷಿ ಪಿತಾಮಹ ಪತ್ರೀಜಿ ಆಶೀರ್ವಾದಗಳೊಂದಿಗೆ


# ಶಂಕರಾಚಾರ್ಯರ
# ನಿರ್ವಾಣಷಟ್ಕಂ

ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್



ಕನ್ನಡ ಅನುವಾದ :
ಕೆ. ಶೋಭಾಲತಾ ಮಲ್ಲಿಕಾರ್ಜುನ

# ಶಂಕರಾಚಾರ್ಯರ
# ‘ನಿರ್ವಾಣಾಷ್ಟಕಂ’



**ವಿವರಣೆ : ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್**

**ಕನ್ನಡ ಅನುವಾದ : ಕೆ. ಶೋಭಾಲತ ಮಲ್ಲಿಕಾರ್ಜುನ**


**ಶ್ರೀರಾಮ ಪಬ್ಲಿಕೇಶನ್ಸ್**

ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,

ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – 560 066

---

**ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್**

ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

**SHANKARACHARYARA NIRVANASTAKAM**

Edited & Published by **Srirama Publications,** Sri Ramadhama Pyaramid Dyanakendra, Narayanappa Garden, Whitefiled, Bangalore - 560 066.

**M.: 9449695503, 8050082689, 9886532204**

ಮೊದಲನೆಯ ಮುದ್ರಣ : 2025

ಹಕ್ಕುಗಳು : ಪ್ರಕಾಶಕರು

ಪ್ರಕಾಶಕರು : ಶ್ರೀರಾಮ ಪಬ್ಲಿಕೇಷನ್ಸ್
ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,
ನಾರಾಯಣಪ್ಪಗಾರ್ಡನ್, ವೈಟ್ ಫೀಲ್ಡ್,
ಬೆಂಗಳೂರು – 560 066
ಮೊ. : 9449695503, 9886532204

ಬಳಸಿದ ಕಾಗದ : ಮ್ಯಾಪಲಿಥೊ ಡೆಮಿ 1/8

ಪ್ರತಿಗಳು : 1000

ಬೆಲೆ : 40/–

ಪುಟಗಳು : v+34 = 39

ಮುಖಪುಟ : ಚಂದ್ರಕಾಂತ ಪಟ್ಟಣ

ಅಕ್ಷರ ಜೋಡಣೆ : **ನಿರಂತರ ಸಾಯಿ ಕಮ್ಯೂನಿಕೇಷನ್ ಪ್ರೈ .ಲಿ**
ಮೊ: 96328 12541

ಮುದ್ರಣ :

**ಪೂರ್ಣಾ ಗ್ರಾಫಿಕ್ಸ್,**

ಬೆಂಗಳೂರು 9844167475

# ಸ್ವ-ಪರಿಚಯ

ನನ್ನ ಹೆಸರು ಎಚ್.ಎನ್.ಶ್ರೀನಿವಾಸ. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ, ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ, ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999ರಲ್ಲಿ ಎಸ್.ಎಸ್.ವೈ. ಅಂದರೆ, ಸಿದ್ಧಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎನ್.ವಿಜಯಲಕ್ಷ್ಮಿ ಸೇರಿ 2008ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ 'ಶ್ರೀ ರಾಮಧಾಮ ಧ್ಯಾನ ಮಂದಿರ' ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು. ಇದನ್ನು ಸಿದ್ಧಸಮಾಧಿ ಯೋಗ ಸಂಸ್ಥಾಪಕರಾದ ಡಾ.ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಎಸ್.ಎಸ್.ವೈ. ಶಿಕ್ಷಕರಿಂದ ಸಾಮೂಹಿಕ ಧ್ಯಾನ ತರಬೇತಿಗಳನ್ನು ಆಯೋಜಿಸುತ್ತಿದ್ದೆವು. 2009ರಲ್ಲಿ ಬ್ರಹ್ಮರ್ಷಿ ಪಿತಾಮಹ ಡಾ.ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ 'ಆನಾಪಾನಸತಿ ಧ್ಯಾನ ವಿಧಾನ'ವನ್ನು ಪರಿಚಯ ಮಾಡಿಸಿದರು. ಪತ್ರೀಜಿಯವರನ್ನು ಭೇಟಿಯಾದ ನಂತರ, ದಿನನಿತ್ಯದ ನನ್ನ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ ತತ್ವಸಿದ್ಧಾಂತದಲ್ಲಿ ಗುರು–ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. 'ಯಾರೂ ಶಾಶ್ವತವಾಗಿ ಗುರುಗಳಲ್ಲ, ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ, ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ, ಎಂದಿಗೂ ಶಿಷ್ಯರಾಗಿಯೇ ಇರಬೇಡಿ' ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ

ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದವಕಾಶವನ್ನು ಒದಗಿಸಿದರು.

ಇದರಲ್ಲಿ ನನಗೆ 'ನಿತ್ಯಅನ್ನದಾನ ಸೇವೆ'ಯ ಜವಾಬ್ದಾರಿಯನ್ನು ವಹಿಸಲಾಯಿತು. ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ, ಆಸಕ್ತಿಯಿಂದ ಧ್ಯಾನಾಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ 'ಸಸ್ಯಾಹಾರ', 'ಸ್ವಾಧ್ಯಾಯ', 'ಸಜ್ಜನ–ಸಾಂಗತ್ಯ, ಅಂದರೆ, ಸತ್ಸಂಗ' ಹಾಗೂ 'ಪಿರಮಿಡ್ ಶಕ್ತಿ ಬಳಕೆ' ಅವಶ್ಯಕ ಎಂದು ಆಧ್ಯಾತ್ಮಶಾಸ್ತ್ರ ತಿಳಿಸುತ್ತದೆ. ನಿರಂತರ, ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ–ವಿಕಾಸ, ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು. ಹೊಸ ಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ 'ಶ್ರೀರಾಮ ಪಬ್ಲಿಕೇಶನ್ಸ್' ಹೆಸರಿನ ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರರಾಘವರಾವ್ ರವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು. ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರುಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡದ ಆಧ್ಯಾತ್ಮ ಸಾಧಕರಿಗೂ ದೊರಕಲೆಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು,
**ಎಚ್. ಎನ್. ಶ್ರೀನಿವಾಸ** ಮತ್ತು
**ಎಸ್. ಎನ್. ವಿಜಯಲಕ್ಷ್ಮಿ ಸಂಸ್ಥಾಪಕರು,** ಶ್ರೀರಾಮಧಾಮ ಧ್ಯಾನಕೇಂದ್ರ

# ವಿಷಯ ಸೂಚಿಕೆ


1. ಶಂಕರಾಚಾರ್ಯರ ನಿರ್ವಾಣಷಟ್ಕಂ – 1ನೇ ಶ್ಲೋಕ

2. ಶಂಕರಾಚಾರ್ಯರ ನಿರ್ವಾಣಷಟ್ಕಂ – 2ನೇ ಶ್ಲೋಕ

3. ಶಂಕರಾಚಾರ್ಯರ ನಿರ್ವಾಣಷಟ್ಕಂ – 3ನೇ ಶ್ಲೋಕ

4. ಶಂಕರಾಚಾರ್ಯರ ನಿರ್ವಾಣಷಟ್ಕಂ – 4ನೇ ಶ್ಲೋಕ

5. ಶಂಕರಾಚಾರ್ಯರ ನಿರ್ವಾಣಷಟ್ಕಂ – 5ನೇ ಶ್ಲೋಕ

6. ಶಂಕರಾಚಾರ್ಯರ ನಿರ್ವಾಣಷಟ್ಕಂ – 6ನೇ ಶ್ಲೋಕ

# ‘ಶಂಕರಾಚಾರ್ಯರ ನಿರ್ವಾಣಷಟ್ಕಂ’

**‘ಬೇರೆ ಮಾಡುವ ವಿಧಾನದಿಂದ ಇದು ಅಲ್ಲ, ಇದು ಅಲ್ಲ ಎಂದು ಅಸತ್ ವಸ್ತುಗಳನ್ನು ಬೇರೆ ಮಾಡಿದ ನಂತರ ಯಾವುದಾದರೆ ವೇದಾಂತ ಶಾಸ್ತ್ರದಿಂದ ಸೂಚಿಸಲ್ಪಟ್ಟಿದೆಯೋ ಅದೇ ಬ್ರಹ್ಮವು. ಅಷ್ಟೇ ಅಲ್ಲ ಯಾವುದಾದರೆ ದ್ವಯವಲ್ಲದ್ದೋ, ನಿರಂತರವು ಆನಂದ ಸ್ವರೂಪವಾದದ್ದೋ, ಏಕವಾದದ್ದೋ, ಅದನ್ನು ಬ್ರಹ್ಮವೆಂದು ತಿಳಿದುಕೊಳ್ಳಬೇಕು.’**

ಅಂದರೆ ಇಲ್ಲಿ ಸೃಷ್ಟಿಯಲ್ಲಿ ಅಸತ್ಯವು, ಸತ್ಯವು ಎರಡು ಸೇರಿಯೇ ಇವೆ. ವಾಸ್ತವವು, ಅವಾಸ್ತವವು ಎರಡೂ ಸೇರಿ ಇರುತ್ತವೆ. ರಾಕ್ಷಸರು, ದೇವತೆಗಳು ಸೇರಿಯೇ ಇರುತ್ತಾರೆ. ಎಲ್ಲಾ ಸೇರಿ ಇರುವುದೇ ಈ ಸೃಷ್ಟಿ, ಈ ಪ್ರಪಂಚ.

ಮಾಯೆ, ಸತ್ಯ ಈ ಎರಡೂ ಕೂಡಾ ಸೇರಿಯೇ ಇರುತ್ತವೆ. ವಿಚಿತ್ರವೇನೆಂದರೆ; ಈ ಮಾಯೆ ಅಂದರೆ ಈ ಅಸತ್ಯವೇ, ಸತ್ಯವಾಗಿ ಅನಿಸುತ್ತಾ ಇರುತ್ತದೆ. ಆದ್ದರಿಂದ ಇವುಗಳನ್ನು ಬೇರೆ ಮಾಡಬೇಕು, ಹೇಗೆ? ಒಂದೊಂದನ್ನು ತೆಗೆದುಕೊಂಡು ಇದು ಸತ್ಯವಲ್ಲ, ಇದು ಸತ್ಯವಲ್ಲ, ಎಂದು ಅಸತ್ಯವಾದ ವಸ್ತುಗಳನ್ನು ಬೇರೆ ಮಾಡಿ, ಅಂದರೆ ಪಕ್ಕಕ್ಕೆ ಇಟ್ಟ ನಂತರ ಕೊನೆಗೆ ಇರುವುದು ವೇದಾಂತ ಶಾಸ್ತ್ರದಲ್ಲಿ ಹೇಳಲಾದ ಬ್ರಹ್ಮವೆಂದು ತಿಳಿದುಕೊಳ್ಳಬೇಕು.

ಆ ಅಸತ್ಯ ವಸ್ತುಗಳನ್ನು, ಬೇರೆ ಮಾಡಬೇಕಾದವು, ಆರಿಸಬೇಕಾದವುಗಳು ಯಾವುವು ಎಂಬ ವಿಷಯಗಳನ್ನು ಕೂಡಾ ಶಂಕರಾಚಾರ್ಯರು ನಿರ್ವಾಣ ಷಟ್ಕದಲ್ಲಿ ಬಹಳ ವಿಪುಲವಾಗಿ ಕೊಟ್ಟಿದ್ದಾರೆ.

ಷಟ್ ಅಂದರೆ ಆರು. ನಿರ್ವಾಟ ಷಟ್ಕ ಎಂದರೆ ನಿರ್ವಾಣವನ್ನು ಹೊಂದಿದವರ ಸ್ಥಿತಿ ಏನೆಂದು ಈ ಆರು ಶ್ಲೋಕಗಳಲ್ಲಿ ಹೇಳಲಾಗಿದೆ. ಇದನ್ನು ನೀವು ಗ್ರಹಿಸಿದರೆ, ಆ ಸ್ಥಿತಿಗೆ ನೀವು ಬೆಳೆದರೆ, ನೀವು ನಿರ್ವಾಣವನ್ನು ಹೊಂದಿದಂತೆಯೇ. ಇನ್ನೂ ನೀವು ಆ ಭಾವದಿಂದ ಇದ್ದರೆ ಆ ಸ್ಥಿತಿಯನ್ನು ಸಂಪಾದಿಸುವುದಕ್ಕೆ ಇನ್ನೂ ಸಮಯ ಹಿಡಿಯುತ್ತದೆ. ಆದ್ದರಿಂದ ಆ ಆರು ಶ್ಲೋಕಗಳಲ್ಲಿ ಶಂಕರಾಚಾರ್ಯರು ಹೇಳಿದ ವಿಷಯಗಳನ್ನು ಒಂದುಬಾರಿ ನಾವು ನೋಡೋಣ.

**ಶ್ಲೋಕ॥ ಮನೋ ಬುದ್ಧ್ಯಹಂಕಾರ ಚಿತ್ತಾದಿ ನಾಹಂ**
**ನ ಚ ಶ್ರೋತ್ರ ಜಿಹ್ವೆ ನ ಚ ಘ್ರಾಣನೇತ್ರ।**
**ನ ಚ ವ್ಯೋಮ ಭೂಮಿರ್ನ ತೇಜೋನ ವಾಯುಃ**
**ಚಿದಾನಂದ ರೂಪಃ ಶಿವೋಹಂ ಶಿವೋಹಂ ॥**

**ತಾತ್ಪರ್ಯ :** ಮನಸ್ಸು, ಬುದ್ಧಿ, ಚಿತ್ತ, ಅಹಂಕಾರವೆಂಬ ನಾಲ್ಕು ವಿಧಗಳಾದ ವೃತ್ತಿಗಳಿಂದ ಕೂಡಿದ ಅಂತಃಕರಣ ನಾನು ಅಲ್ಲ. ಮೂಗು, ಕಣ್ಣು, ಕಿವಿ, ನಾಲಿಗೆ, ಚರ್ಮ ಎನ್ನುವ ಜ್ಞಾನೇಂದ್ರಿಯಗಳು ನಾನು ಅಲ್ಲ. ಆಕಾಶ, ಭೂಮಿ, ಜಲ, ಅಗ್ನಿ, ವಾಯು ಎನ್ನುವ ಪಂಚಭೂತಗಳು ನಾನಲ್ಲ. ಚಿದಾನಂದ ರೂಪನಾದ ಶಿವನೇ ನಾನು, ಶಿವನೇ ನಾನು.

ಶ್ರೀ ಶಂಕರಾಚಾರ್ಯರು ಮನಸ್ಸು ನಾನು ಅಲ್ಲ ಎಂದು ಹೇಳಿದ್ದಾರೆ. ಆದರೆ ಪ್ರತಿಯೊಬ್ಬರು ಆ ಮನಸ್ಸಿಗೆ ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾರೆ, ಆ ಮನಸ್ಸನ್ನೇ ತೃಪ್ತಿ ಪಡಿಸುವುದಕ್ಕೆ ಪ್ರಯತ್ನಿಸುತ್ತಾರೆ, ಜೀವನವನ್ನು ಅದಕ್ಕೆ ಅಂಕಿತ ಮಾಡುತ್ತಿದ್ದಾರೆ. ಇಷ್ಟು ಮಾಡಿ ಮನಸ್ಸು ನೀನಾ ಅಂದರೆ ಮನಸ್ಸು ನೀನಲ್ಲ.

ನೀವು ನೋಡಿ, ಈ ಬಾಹ್ಯೇಂದ್ರಿಯಗಳು ಅಂದರೆ ಜ್ಞಾನೇಂದ್ರಿಯಗಳಾಗಲಿ, ಕರ್ಮೇಂದ್ರಿಯಗಳಾಗಲೀ, ಮನಸ್ಸನ್ನಾಧರಿಸಿ ಕೆಲಸ ಮಾಡುತ್ತಿವೆ. ಮನಸ್ಸು ಹೇಳಿದಂತೆಯೇ ಅವು ಕೇಳುತ್ತಿವೆ. ಈ ಇಂದ್ರಿಯಗಳ ಮೂಲಕವೇ ಮನಸ್ಸು ಎಷ್ಟೋ ತೃಪ್ತಿಪಡುತ್ತಿದೆ. ಆದ್ದರಿಂದ ಮಾನವನು ಜೀವನ ಪರ್ಯಂತ ಮನಸ್ಸನ್ನು ತೃಪ್ತಿಪಡಿಸುವುದಕ್ಕೇ ಪ್ರಯತ್ನಿಸುತ್ತಿದ್ದಾನೆ. ಮನಸ್ಸು ಕೂಡಾ ಈ ಇಂದ್ರಿಯಗಳ ಮೂಲಕ ಸುಖಪಡಬೇಕೆಂದು ಕೋರಿಕೊಳ್ಳುತ್ತದೆ.

ಕಣ್ಣುಗಳ ಮೂಲಕ ಇಷ್ಟವಾದದ್ದನ್ನು ನೋಡಬೇಕೆಂದು, ಕಿವಿಗಳ ಮೂಲ ಇಷ್ಟವಾದದ್ದನ್ನು ಕೇಳಬೇಕೆಂದು, ಮೂಗಿನ ಮೂಲಕ ಇಷ್ಟ ಬಂದ ವಾಸನೆಯನ್ನು ನೋಡಬೇಕೆಂದು, ನಾಲಿಗೆಯ ಮೂಲಕ ಇಷ್ಟ ಬಂದವುಗಳನ್ನೆಲ್ಲಾ ತಿನ್ನಬೇಕೆಂದು, ಚರ್ಮದ ಮೂಲಕ ಸುಖಪಡಬೇಕೆಂದು ಬೇಸಿಗೆ ಕಾಲದಲ್ಲಿ ಎಸಿಗಳು, ಹಾಗೆಯೇ ಚಳಿಗಾಲದಲ್ಲಿ ಹೀಟರ್‌ಗಳನ್ನು ಇಟ್ಟುಕೊಂಡು, ಇಷ್ಟ ಬಂದಂತೆ ಇರಬೇಕೆಂದು ಪ್ರಯತ್ನಿಸುತ್ತಾ ಇರುತ್ತದೆ.

ಹಾಗೆ ಜೀವಿಸುತ್ತಾ ಎಷ್ಟೋ ಸುಖಪಟ್ಟೆನೆಂದು ಭಾವಿಸುತ್ತಾರೆ. ಸರಿ ಸುಖಪಡುತ್ತಿದ್ದೀರಿ, ಸುಖಪಡುವುದಕ್ಕೆ ಪ್ರಯತ್ನಿಸುತ್ತಿದ್ದೀರಿ. ಇಷ್ಟಕ್ಕೂ ಈ ಸುಖವನ್ನು

ಯಾರು ಅನುಭವಿಸುತ್ತಿದ್ದಾರೆ? ಆ ಸುಖವನ್ನು ಮನಸ್ಸೇ ಅನುಭವಿಸುತ್ತದೆ. ಹಾಗಾಗಿ ಈ ಸುಖಕ್ಕಾಗಿ ಜೀವನವೆಲ್ಲಾ ಪ್ರಯತ್ನಿಸುತ್ತಿದ್ದೀರಿ. ಮತ್ತೆ ಮನಸ್ಸಿಗೆ ಇಂತಹ ಸುಖಗಳುಂಟಾಗಬೇಕೆಂದರೆ ಮುಖ್ಯವಾಗಿ ಹಣ ಬೇಕು.

ಅದಕ್ಕೆ ಪ್ರತಿಯೊಬ್ಬರೂ ಕೂಡಾ ಹಣ ಸಂಪಾದನೆಗೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತಾ, ದಿನದಲ್ಲಿ ಹೆಚ್ಚು ಸಮಯವನ್ನು ಅದಕ್ಕೆ ಕೊಡುತ್ತಿದ್ದಾರೆ. ಕೆಲವರು ಉದ್ಯೋಗವನ್ನು ಮಾಡುತ್ತಿದ್ದಾರೆ, ಕೆಲವರು ವ್ಯಾಪಾರವನ್ನು ಮಾಡುತ್ತಿದ್ದಾರೆ, ಮತ್ತೆ ಕೆಲವರು ಅವರ ನೈಪುಣ್ಯಕ್ಕನುಸಾರವಾಗಿ ಯಾವುದೋ ಒಂದು ವೃತ್ತಿಯಲ್ಲಿದ್ದಾರೆ. ಇನ್ನೂ ಅನೇಕ ರೀತಿಯಾದಂತಹ ಪದ್ಧತಿಯಲ್ಲಿ ಹಣವನ್ನು ಸಂಪಾದಿಸುತ್ತಿದ್ದಾರೆ.

ಏಕೆ ಅಂದರೆ? ಮನಸ್ಸನ್ನು ತೃಪ್ತಿಪಡಿಸುವುದಕ್ಕಾಗಿ, ಜೀವನ ಪರ್ಯಂತ ಹಾಗೆ ತೃಪ್ತಿ ಪಡಿಸುತ್ತಲೇ ಇದ್ದಾರೆ. ಇಷ್ಟಕ್ಕೂ ಈ ಮನಸ್ಸು ನೀನಾ? ಅಂದರೆ ನಾನು ಅಲ್ಲ. ಇಷ್ಟಕ್ಕೂ ನೀನು ಯಾರು? ಅಂದರೆ ಚಿದಾನಂದ ರೂಪನಾದ ಶಿವನೇ ನಾನು ಎಂದು ಹೇಳಿದ್ದಾರೆ ಶಂಕರಾಚಾರ್ಯರು. ಯಾವಾಗಲೂ ಆನಂದವಾಗಿ ಇರುವ ಆನಂದವೇ ಸ್ವರೂಪವಾಗಿರುವ ಶಿವನು, ಅಂದರೆ ಆ ಬ್ರಹ್ಮವೇ ನಾನು. ಅದನ್ನೇ ಆತ್ಮವೆಂದು ಕೂಡಾ ಕರೆಯುತ್ತಾರೆ. ಅಂದರೆ ನೀವು ಆತ್ಮವಾಗಿದ್ದು, ಒಟ್ಟಾರೆ ಜೀವನ, ಜೀವನವೆಲ್ಲಾ ಈ ಮನಸ್ಸಿಗೇ ದಾಸರಾಗಿ ಹೋಗಿದ್ದೀರಿ. ಮನಸ್ಸನ್ನು ತೃಪ್ತಿಪಡಿಸುವುದಕ್ಕೆ ನೀವು ಕಷ್ಟ ಪಡುತ್ತಿದ್ದೀರಿ. ಸಂಪಾದಿಸುತ್ತಿದ್ದೀರಿ, ಸುಖಪಡಿಸುತ್ತಿದ್ದೀರಿ.

ಅದಕ್ಕೆ ಪತ್ರೀಜಿಯವರು ಅಗತ್ಯಗಳಿಗೆ ಪರಿಮಿತವಾಗಬೇಕು. ಕೋರಿಕೆಗಳಿಗೆ ದಾಸರಾಗಬಾರದು ಎಂದು ಹೇಳಿದ್ದಾರೆ. ಕೋರಿಕೆಗಳೆನ್ನುವಂತವು ಮನಸ್ಸಿಗೆ ಸಂಬಂಧಿಸಿದವು, ಅಗತ್ಯಗಳು ಶರೀರಕ್ಕೆ ಸಂಬಂಧಿಸಿದವು. ಈ ಶರೀರವು ಜೀವನ ಸಾಗಿಸಬೇಕೆಂದರೆ ಅದಕ್ಕೆ ಕೆಲವು ಅಗತ್ಯಗಳಿವೆ. ಸಮಯಕ್ಕೆ ಇಂತಿಷ್ಟು ತಿಂಡಿ ತಿನ್ನಬೇಕು. ಅದಕ್ಕೆ ಪತ್ರೀಜಿಯವರು ಹೇಳುತ್ತಾರೆ ಒಂದು ರೊಟ್ಟಿ ತುಂಡು, ಒಂದು ಉಪ್ಪಿನಕಾಯಿ ತುಂಡು ಸರಿ ಹೋಗದೇ ಎಂದು.

ಅಂದರೆ ಹಾಗೆ ಜೀವಿಸಿರಿ ಎಂದಲ್ಲ. ಏನು ಇದ್ದರೆ ಅದನ್ನು ಶರೀರಕ್ಕೆ ಕೊಟ್ಟರೆ ಅಗತ್ಯವು ತೀರಿ ಹೋಗುತ್ತದೆ. ಏನೋ ಒಂದು ಬಟ್ಟೆ ತೊಟ್ಟರೆ ಅಗತ್ಯವು ಪೂರೈಸಿಬಿಡುತ್ತದೆ. ಅದಕ್ಕೆ ರೇಷ್ಮೇ ಸೀರೆಗಳು, ರೇಷ್ಮೆ ವಸ್ತ್ರಗಳು ಅಗತ್ಯವಿಲ್ಲ. ಯಾವುದೋ ಒಂದು ಮನೆ ಇದ್ದರೆ ಸರಿ ಹೋಗುತ್ತದೆ. ಅರಮನೆಯೇ ಬೇಕಾಗಿಲ್ಲ.

ಏಕೆಂದರೆ ಆತ್ಮನಾದ ನೀನು ಉನ್ನತವಾದ ಸ್ಥಿತಿಗೆ ಸೇರಿಕೊಳ್ಳಬೇಕು. ಅಂದರೆ ಬೇಕಾದ ಸಾಧನೆ, ಸಂಪಾದಿಸಬೇಕಾದ ಜ್ಞಾನವು ಶರೀರವಿದ್ದರೇನೇ ಸಾಧ್ಯ. ಆ ಶರೀರವು ಬೆಳ್ಳಗಿದ್ದರೂ, ಕಪ್ಪಾಗಿ ಇದ್ದರೂ, ಗಿಡ್ಡವಾಗಿದ್ದರೂ, ಎತ್ತರವಾಗಿದ್ದರೂ, ಹೇಗಿದ್ದರೂ ಸರಿ, ಆತ್ಮದ ಉನ್ನತಿಗಾಗಿ ಮಾಡುವ ಕೆಲಸಗಳನ್ನು, ಲಾಭವನ್ನುಂಟು ಮಾಡುವ ಕೆಲಸಗಳನ್ನು ಈ ಶರೀರದಿಂದಲೇ ಮಾಡಬೇಕು. ಅದಕ್ಕೆ ಆತ್ಮನಾದ ನೀವು ಭೂಮಿಗೆ ಬಂದು ಈ ಶರೀರವನ್ನು ತೆಗೆದುಕೊಂಡಿದ್ದೀರಿ. ಅಷ್ಟೇ ಹೊರತು ಆ ದೇಹವನ್ನು ಸುಖಪಡಿಸುವುದಕ್ಕಾಗಿ ನೀವು ಭೂಮಿಗೆ ಬಂದಿಲ್ಲ.

ವಿಚಿತ್ರವೇನೆಂದರೆ? ಯಾವ ದೇಹದಿಂದಾದರೆ ನೀವು ಸಾಧನೆಗಳನ್ನು ಮಾಡಿಸಬೇಕೆಂದಿದ್ದಿರೋ ಆ ದೇಹವು ಅವುಗಳನ್ನು ಬಿಟ್ಟು ಮಧ್ಯದಲ್ಲಿ ಇರುವಂತ ಮನಸ್ಸೊಂದರ ಪ್ರಾಮುಖ್ಯತೆಯಲ್ಲಿ ಬಿದ್ದು ಹೋಗಿದೆ.

ಆತ್ಮರಾದ ನಿಮ್ಮನ್ನು ಆ ಶರೀರವು ಹಿಡಿಸಿಕೊಳ್ಳುತ್ತಿಲ್ಲ. ಬಂದಿರುವುದು ಒಂದಕ್ಕಾಗಿ, ಮಾಡುತ್ತಿರುವುದು ಮತ್ತೊಂದು. ಮತ್ತೆ ಇದಕ್ಕೆ ಕಾರಣ ಯಾರು? ಅಂದರೆ ಮನಸ್ಸೇ ಇದಕ್ಕೆ ಕಾರಣ. ಈ ಮನಸ್ಸಿನ ಮಾಯೆಯಲ್ಲಿ ಬಿದ್ದು ಶರೀರವನ್ನು ಒಂದಕ್ಕೆ ಉಪಯೋಗಿಸಬೇಕಾಗಿರುವುದನ್ನು ಮತ್ತೊಂದಕ್ಕೆ ಉಪಯೋಗಿಸುತ್ತಿದ್ದೀರಿ.

ನಿಜವಾಗಿ ಹೇಳಬೇಕೆಂದರೆ ಯಾರಾದರೆ ಜೂಮ್‌ನಲ್ಲಿ ಪಾಲ್ಗೊಳ್ಳುತ್ತಾರೋ, ಭೀಮವರಂಗೆ ಬರುತ್ತಾರೋ, ಅವರೇ ಮನಸ್ಸೊಂದರ ಮಾಯೆಯಿಂದ ಹೊರ ಬರುವುದಕ್ಕೆ ಪ್ರಯತ್ನವನ್ನು ಮಾಡುವವರು. ಇನ್ನು ಉಳಿದವರೆಲ್ಲಾ ಕೂಡಾ ಮನಸ್ಸೊಂದರ ಮಾಯೆಯಲ್ಲಿ ಸಿಲುಕಿಕೊಂಡು ಹಾಗೇ ಜೀವಿಸುತ್ತಿದ್ದಾರೆ. ಏಕೆಂದರೆ ಮೇಲಿನ ಲೋಕಗಳಲ್ಲಿರುವಾಗ ಆತ್ಮವೊಂದೇ ಇರುತ್ತದೆಯಾದ್ದರಿಂದ ಆ ಆತ್ಮವು ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳುತ್ತದೆ. ಅದನ್ನೇ ಪ್ರಣಾಳಿಕೆ ಎನ್ನುತ್ತಾರೆ. ಆತ್ಮನಾದ ತಾನು ದೇಹವನ್ನು ತೆಗೆದುಕೊಂಡು ಆ ರೀತಿಯಾದ ಕೆಲಸಗಳನ್ನು ಮಾಡಬೇಕೆಂದು ಒಂದು ಪ್ರಣಾಳಿಕೆಯೊಡನೆ ಭೂಮಿಗೆ ಬರುತ್ತದೆ.

ಅಲ್ಲಿರುವುದು ಆತ್ಮವೇ ಆದ್ದರಿಂದ ಅಲ್ಲಿರುವಾಗ ಆತ್ಮಕ್ಕೆ ಮಹಾನ್ ಶ್ರೇಷ್ಠರಿಂದ ಕೆಲವು ಕೌನ್ಸಿಲಿಂಗ್‌ಗಳು ನಡೆಯುತ್ತವೆ. ಅವರು ಎಷ್ಟು ಹೊತ್ತು ಆತ್ಮದ ಲಾಭದ ಕುರಿತೇ ಹೇಳುತ್ತಾರೆ, ಅವರು ಮೊದಲೇ ಹೇಳುತ್ತಾರೆ, ನೀನು ಭೂಮಿಯ ಮೇಲೆ ಹೋಗುತ್ತಿರುವೆ, ಶರೀರವನ್ನು ತೆಗೆದುಕೊಳ್ಳುತ್ತಿರುವೆ, ಶರೀರದೊಂದಿಗೆ ಮನಸ್ಸೂ ಕೂಡಾ ತಯಾರಾಗುತ್ತದೆ, ಅದರ ಮಾಯೆಯಲ್ಲಿ ಬೀಳಬೇಡ, ಅದರ ಪ್ರಲೋಭನೆಗಳಿಗೆ

ಬಗ್ಗಬೇಡ, ಅವುಗಳಿಗೆ ಆಕರ್ಷಿತನಾಗಬೇಡ, ಆ ಮನಸ್ಸಿಗೆ ದಾಸನಾಗಬೇಡ, ಈ ಕೆಲಸಗಳನ್ನು ಮಾಡು, ನೀನು ಎಷ್ಟೋ ಶ್ರೇಷ್ಠನಾಗುವೆ ಎಂದು ಅಲ್ಲಿರುವ ನಿಮಗೆ ಅಂದರೆ ಆತ್ಮಕ್ಕೆ ಮೇಲಿರುವಂತಹ ಆ ಕೌನ್ಸಲಿಂಗ್‌ಗಳನ್ನು ಮಾಡುವವರು ಸಲಹೆಯನ್ನು ಕೊಡುತ್ತಾರೆ.

ಆದರೆ ಭೂಮಿಗೆ ಬಂದು ಶರೀರವನ್ನು ತೆಗೆದುಕೊಂಡ ಮೇಲೆ ಇವು ಯಾವುವೂ ನೆನಪಿರುವುದಿಲ್ಲ. ಶರೀರ ಒಂದೇ ಕಾಣಿಸುತ್ತದೆಯಾದ್ದರಿಂದ ಅದೇ ನಾನು ಎಂದುಕೊಳ್ಳುತ್ತೀರಿ. ಆತ್ಮದ ಕುರಿತು ತಿಳುವಳಿಕೆ ಇರುವುದಿಲ್ಲ. ಆದ ಕಾರಣ ಆ ಶರೀರಕ್ಕೆ ಲಾಭವನ್ನುಂಟು ಮಾಡುವ ಕೆಲಸಗಳನ್ನೇ ಮಾಡುತ್ತಾ ಇರುತ್ತೀರಿ. ಭೂಮಿ ಮೇಲೆ ಹೋದ ಮೇಲೆ ನಾವು ಮರೆತು ಹೋಗಿದ್ದೇವೆ ಎಂಬ ವಿಷಯವು ಪ್ರಕೃತಿಗೆ ಗೊತ್ತು.

ಆದ್ದರಿಂದ ಪ್ರಕೃತಿಯಲ್ಲಿ ಒಂದು ಏರ್ಪಾಟು ಇದೆ. ಪ್ರಕೃತಿ ಏನು ಮಾಡುತ್ತದೆ ಎಂದರೆ? ಜೀವನದಲ್ಲಿ ನಡೆಯುವ ಎಷ್ಟೋ ಸಂಘಟನೆಗಳ ಮೂಲಕ, ಹಾಗೆಯೇ ಕೆಲವರು ಮಾಯೆಯನ್ನು ಜಯಿಸಿದ ಸದ್ಗುರುಗಳ ಮೂಲಕ ತನ್ನ ಪ್ರಣಾಳಿಕೆಯ ಪ್ರಕಾರ ಜೀವಿಸಬೇಕೆಂದು ತಿಳಿಯಪಡಿಸುತ್ತಾ ಇರುತ್ತದೆ.

ಹಾಗೆಯೇ ಈ ಪ್ರಪಂಚದಲ್ಲಿ ಇವುಗಳನ್ನು ತಿಳಿಯಪಡಿಸುವುದಕ್ಕಾಗಿ ದೊಡ್ಡವರು, ಯೋಗಿಗಳು ಬರೆದ ಎಷ್ಟೋ ಜ್ಞಾನವಂತವಾದ ಪುಸ್ತಕಗಳು ಇವೆ. ಆ ಪುಸ್ತಕಗಳ ಮೂಲಕ ಕೂಡಾ ಇವು ತಿಳಿಯಲ್ಪಡುತ್ತವೆ. ಹೀಗೆ ಎಷ್ಟೋ ರೀತಿಯಲ್ಲಿ ಪ್ರಕೃತಿ, ಆತ್ಮವು ಮರೆತು ಹೋದ ವಿಷಯಗಳನ್ನು ನೆನಪು ಮಾಡುತ್ತದೆ. ಅಷ್ಟೇ ಅಲ್ಲ ಅಂತರಾತ್ಮ ಪ್ರಬೋಧದ ಮೂಲಕ ಅಂದರೆ ಆ ಶರೀರದಲ್ಲಿರುವ ಆತ್ಮದ ಮೂಲಕ ಎಚ್ಚರಿಸುತ್ತಲೇ ಇರುತ್ತದೆ. ಇಷ್ಟು ರೀತಿಯಾಗಿ ನೆನಪು ಮಾಡಿದರೂ ಕೂಡಾ, ಬಲವಾದ ಮಾಯಾ ಪ್ರಭಾವಕ್ಕೆ ಒಳಗಾದಂತಹ ಮನಸ್ಸು, ಇವುಗಳನ್ನು ಲೆಕ್ಕ ಮಾಡದೇ ತನ್ನ ಸುಖವನ್ನೇ ನೋಡಿಕೊಳ್ಳುತ್ತದೆ.

ಒಂದು ಬಾರಿ ರಮಣ ಮಹರ್ಷಿಯನ್ನು ಗಮನಿಸಿರಿ, ಏನು ಇದ್ದರೆ ಅದನ್ನೇ ಉಣ್ಣುತ್ತಿದ್ದರು. ಆತನು ಬಟ್ಟೆಗಳಿಗಾಗಿ, ಅಲಂಕಾರಗಳಿಗಾಗಿ ಲಕ್ಷಗಳನ್ನು, ಕೋಟಿಗಳನ್ನು ಖರ್ಚು ಮಾಡಲಿಲ್ಲ. ಏನೋ ಮಳೆಯಿಂದ, ಬಿಸಿಲಿನಿಂದ ರಕ್ಷಣೆ ಪಡೆಯುವುದಕ್ಕಾಗಿ ಸಣ್ಣ ಮನೆಯಲ್ಲಿ ಇರುತ್ತಿದ್ದನು ಅಷ್ಟೇ, ಯಾವ ಕೋರಿಕೆಗಳೂ ಇಲ್ಲ. ಸಂಪೂರ್ಣವಾಗಿ ಅಗತ್ಯಗಳಿಗಾಗಿ ಪರಿಮಿತವಾಗಿ ಆತ್ಮೋನ್ನತಿಗೆ ಶ್ರಮಿಸಿದನು. ಹಾಗೆ ನೀವೇನು ಜೀವಿಸಬೇಕಿಲ್ಲ.

ಇರುವವನ್ನು ಅನುಭವಿಸಿರಿ, ಇಲ್ಲವೆಂದು ಅಳಬೇಡಿರಿ, ಅವುಗಳನ್ನು ಸಂಪಾದಿಸುವುದಕ್ಕೆ ತಪ್ಪುಗಳನ್ನು, ಪಾಪಗಳನ್ನು ಮಾಡಬೇಡಿರಿ. ಕುಟುಂಬವನ್ನು, ಸಂಸಾರವನ್ನು ನೋಡಿಕೊಳ್ಳುತ್ತಾ ನಿಮ್ಮ ವಿರಾಮದ ಸಮಯವನ್ನು ಆತ್ಮಕ್ಕೆ ಬಳಸಿಕೊಳ್ಳಿರಿ ಎಂದು ಪತ್ರೀಜಿಯವರು ಬೋಧಿಸಿದ್ದಾರೆ. ಅಗತ್ಯಗಳನ್ನು ಬಿಡಿರಿ ಎಂದೇನೂ ಅವರು ಹೇಳಿಲ್ಲ. ಸಂಸಾರವನ್ನು ಮಾಡುತ್ತಲೇ ನಿರ್ವಾಣವನ್ನು ಸಾಧಿಸಿರಿ ಎಂದಿದ್ದಾರೆ. ಸಂಸಾರದಲ್ಲಿಯೇ ನಿರ್ವಾಣವೆಂದಿದ್ದಾರೆ ಪತ್ರೀಜಿಯವರು.

ಆದ್ದರಿಂದ ಯಾರಾದರೆ ಈ ಅಂತಃಕರಣವಾದಂತಹ ಮನಸ್ಸು ನಾನಲ್ಲ ಎಂದು ತಿಳಿದುಕೊಂಡು ತೀವ್ರ ಸಾಧನೆಯಿಂದ ಈ ಮನಸ್ಸೊಂದರ ಪ್ರಾಮುಖ್ಯತೆಯನ್ನು ಕಡಿಮೆ ಮಾಡಿ, ಮನಸ್ಸನ್ನು ತನ್ನ ಅಧೀನದಲ್ಲಿ ಇಟ್ಟು ಕೊಳ್ಳುತ್ತಾರೋ, ಅವರೇ ನಿರ್ವಾಣವನ್ನು ಹೊಂದ ಬಲ್ಲವರಾಗುತ್ತಾರೆ. ಅಂತಹ ಸ್ಥಿತಿಯನ್ನು ಸಂಪಾದಿಸಿ ಇವು ನಾನಲ್ಲ, ನಾನು ಶಿವನು ಎಂದು, ಯಾರಾದರೆ ಬ್ರಹ್ಮವೆಂದು ತಿಳಿದುಕೊಳ್ಳುತ್ತಾರೋ ಅವರು ನಿರ್ವಾಣವನ್ನು ಹೊಂದಿದಂತೆ. ಇದೇ ಈ ಶ್ಲೋಕದ ಮೂಲ ಶಂಕರಾಚಾರ್ಯರು ಬೋಧಿಸಿರುವ ಸಂದೇಶವಾಗಿದೆ.

ಅವರು ಇನ್ನು ಏನು ಹೇಳಿದ್ದಾರೆಂದರೆ ಕಣ್ಣು, ಕಿವಿ, ನಾಲಿಗೆ, ಎಂಬ ಜ್ಞಾನೇಂದ್ರಿಯಗಳು ನಾನಲ್ಲ, ಇನ್ನು ಏನು ಹೇಳಿದ್ದಾರೆಂದರೆ ಆಕಾಶವು, ಭೂಮಿ, ಜಲ, ಅಗ್ನಿ, ವಾಯುವು ಎಂಬ ಪಂಚಭೂತಗಳು ನಾನು ಅಲ್ಲ. ಏಕೆಂದರೆ ಶರೀರವು ಪಂಚಭೂತಗಳಿಂದ ತಯಾರಾಗಿದೆ. ಅವು ಯಾವುವೂ ನಾನು ಅಲ್ಲ. ನಾನು ಶಿವನು, ನಾನು ಬ್ರಹ್ಮವು ಎಂದು ತಿಳಿದುಕೋ ಎಂದಿದ್ದಾರೆ.

*****

**"ಅಮೃತವನ್ನು ಕುಡಿಯುವುದು ಅಂದರೆ**
**ಆತ್ಮ ದರ್ಶನವು ಆದಂತೆಯೇ"**

**ಬ್ರಹ್ಮವಿದ್ವರಿಷ್ಟ ರಾಜ್ಯಲಕ್ಷ್ಮಿ ಅಮ್ಮನವರು**

**"ಮನುಷ್ಯನ ಮೊಟ್ಟಮೊದಲ ಶತೃವು ಮನಸ್ಸು"**

**ಬ್ರಹ್ಮವಿದ್ವರಿಷ್ಟ ರಾಜ್ಯಲಕ್ಷ್ಮಿ ಅಮ್ಮನವರು**

**"ಬ್ರಹ್ಮ ಜ್ಞಾನವನ್ನು ತಿಳಿದುಕೊಂಡವರೇ**
**ಪರಮಾತ್ಮನ ದರ್ಶನವನ್ನು ಹೊಂದಬಲ್ಲರು"**

**ಬ್ರಹ್ಮವಿದ್ವರಿಷ್ಟ ರಾಜ್ಯಲಕ್ಷ್ಮಿ ಅಮ್ಮನವರು**

# 'ಶಂಕರಾಚಾರ್ಯರು ಹೇಳಿದ ಎರಡನೆಯ ಶ್ಲೋಕ'

ಈ ಸೃಷ್ಟಿಯಲ್ಲಿ ಕಾಣಿಸುವಂತವುಗಳಾಗಲಿ, ಸೃಷ್ಟಿಸಲ್ಪಟ್ಟಿರುವಂತವುಗಳಾಗಲಿ ಯಾವುವು ಶಾಶ್ವತವಲ್ಲ. ಅವೆಲ್ಲ ಸ್ವಲ್ಪ ಕಾಲವೇ ಇರುವಂತವುಗಳು. ಅವೆಲ್ಲಾ ಆ ಬ್ರಹ್ಮನಿಂದಲೇ ಸೃಷ್ಟಿಸಲ್ಪಟ್ಟಿರುವಂತವೇ.

ಆದ ಕಾರಣ ಆ ಬ್ರಹ್ಮವೇ ಶಾಶ್ವತವಾದವನು. ಆ ಬ್ರಹ್ಮನಿಂದ ಉದ್ಭವಿಸಿದ ಅಂಶಗಳು ಕೂಡಾ ಶಾಶ್ವತವಾದವೇ. ಸೃಷ್ಟಿಸಲ್ಪಟ್ಟಿರುವಂತವು ಬೇರೆ, ಅತನಿಂದ ಉದ್ಭವಿಸಿದವು ಬೇರೆ. ಆತನಿಂದ ಸೃಷ್ಟಿಸಲ್ಪಟ್ಟ ಪ್ರತಿಯೊಂದೂ ಕೆಲವು ಕಾಲ ಮಾತ್ರವೇ ಇರುತ್ತವೆ. ಅದು ಸೃಷ್ಟಿಸಲ್ಪಡುತ್ತದೆ. ಸ್ವಲ್ಪ ಕಾಲವಿರುತ್ತದೆ ನಂತರ ಅದೃಶ್ಯವಾಗುತ್ತದೆ.

ಆದರೆ ಆತನೊಳಗಿನಿಂದ ಉದ್ಭವಿಸಿದಂತಹ ಆ ಆಂಶಾತ್ಮವೂ ಕೂಡಾ ಬ್ರಹ್ಮವೇ, ಎಲ್ಲಾ ಒಂದೇ. ಅಂಶ, ಆತನೂ ಎರಡೂ ಒಂದೇ. ಅದಕ್ಕೆ ಜೀಸಸ್ ಕ್ರೈಸ್ತನು ನಾನು ನನ್ನ ತಂದೆ ಒಂದೇ, ನಾನು, ನೀವು ಒಂದೇ ಎಂದು ಹೇಳಿದ್ದಾನೆ. ಇಲ್ಲಿ ನಾವೆಲ್ಲಾ ಕೂಡ ಸೃಷ್ಟಿಸಲ್ಪಟ್ಟಿರುವ ಶರೀರವು ನಾನು ಎಂದುಕೊಳ್ಳುತ್ತಿದ್ದೇವೆ. ಆದರೆ ಈ ಕಾಣಿಸುವ ಸೃಷ್ಟಿಸಲ್ಪಟ್ಟಿರುವ ಶರೀರಗಳು ನಾವಲ್ಲ. ನಾವು ಆತ್ಮಗಳು, ಇದೇ ತಿಳಿದುಕೊಳ್ಳಬೇಕಾಗಿರುವ ರಹಸ್ಯ, ತಿಳಿದುಕೊಳ್ಳಬೇಕಾಗಿರುವಂತ ಸತ್ಯ.

ಇದನ್ನು ತಿಳಿದುಕೊಳ್ಳುವವರೆಗೂ ಯಾರಾಗಲಿ ಸರಿ ಜನ್ಮಗಳನ್ನು ತೆಗೆದುಕೊಳ್ಳುತ್ತಲೇ ಇರುತ್ತಾರೆ. ನಿನ್ನನ್ನು ನೀನು ತಿಳಿದುಕೊಂಡರೆ ಜನ್ಮವೇ ಇಲ್ಲವೆನ್ನುತ್ತಾರೆ. ರಮಣ ಮಹರ್ಷಿಗಳು ಕೂಡಾ ನಿನ್ನನ್ನು ನೀನು ತಿಳಿದುಕೋ ಎನ್ನುತ್ತಾರೆ. ಏನನ್ನು ತಿಳಿದುಕೊಳ್ಳಬೇಕು? ನಾನೇ ಬ್ರಹ್ಮವು ಎಂದು ತಿಳಿದುಕೊಳ್ಳಬೇಕು. ಎಷ್ಟೋ ಇವೆ, ಯಾವುದೂ ನಾನಲ್ಲ. ಆ ಸ್ಥಿತಿಗೆ ನಾವು ಸೇರಿದಾಗ ನಮಗೆ ಜನ್ಮವೇ ಇರದು.

ಲೋಕದಲ್ಲಿ ಎಲ್ಲರೂ ಅದನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡದೇ, ತಪ್ಪದು ಎಂದು ಮದುವೆ ಮಾಡಿಕೊಳ್ಳುತ್ತಿದ್ದಾರೆ. ತಪ್ಪದು ಎಂದು ಮಕ್ಕಳನ್ನು ಹಡೆಯುತ್ತಾರೆ. ಎಷ್ಟೋ ನೋವುಗಳು ಬಂದವು ಎನ್ನುತ್ತಾರೆ. ಜನ್ಮವಿದ್ದಾಗ ನೋವು ಇರದೇ?

ಎಷ್ಟರೊಂದಿಗೆ ಹೋಲಿಸಿಕೊಂಡರೂ ನೋವು ತಪ್ಪದು. ಶಂಕರಾಚಾರ್ಯರು ಹೇಳಿದರೂ, ಮಾನವರು ತಪ್ಪದು ಎಂದು ಈ ಕೆಸರಿನೊಳಗೆ ಇಳಿಯುತ್ತಿದ್ದಾರೆ.

ಹಾಗಾಗಿ ಶಂಕರಾಚಾರ್ಯರು ಹೇಳಿದ ಎರಡನೆಯ ಶ್ಲೋಕವನ್ನು ಕುರಿತು ತಿಳಿದುಕೊಳ್ಳೋಣ.

**ಶ್ಲೋಕ॥ ನ ಚ ಪ್ರಾಣ ಸಂಜ್ಞೋ ನವೈ ಪಂಚವಾಯುಃ**
**ನ ವಾ ಸಪ್ತಧಾತು ರ್ನವಾ ಪಂಚಕೋಶಃ**
**ನ ವಾಕ್ಪಾಣಿ ಪಾದೌ ನ ಚೋ ಪಸ್ಥ ಪಾಯೂ**
**ಚಿದಾನಂದ ರೂಪಃ ಶಿವೋಹಂ ಶಿವೋಹಂ॥**

**ತಾತ್ಪರ್ಯ:** ಪ್ರಾಣವು, ಅಪಾನವು, ಉದಾನವು, ವ್ಯಾನವು, ಸಮಾನವು ಎಂಬ ಪಂಚವಾಯುಗಳು ಅಂದರೆ ಪಂಚಪ್ರಾಣಗಳು ನಾನಲ್ಲ. ಹಾಗೆಯೇ ಸ್ಥೂಲ ದೇಹಕ್ಕೆ ಕಾರಣವಾದ ರಸ, ರಕ್ತ, ಮಾಂಸ, ಮೇಧಸ್ಸು, ಮೂಳೆ, ಮಜ್ಜೆ, ಶುಕ್ಲ–ಶೋಣಿತೆಗಳು ಇಂತಹ ಈ ಸಪ್ತಧಾತುಗಳು ಅಂದರೆ ಏಳು ಧಾತುಗಳು ನಾನಲ್ಲ. ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ, ಪಂಚಕೋಶಗಳೂ ನಾನಲ್ಲ. ಅಷ್ಟೇ ಅಲ್ಲ, ಕರ್ಮೇಂದ್ರಿಯಗಳಾದಂತಹ ಕೈಗಳು, ಕಾಲುಗಳು, ಬಾಯಿ (ವಾಕ್) ಮಲದ್ವಾರ, ಮೂತ್ರದ್ವಾರವು ನಾನಲ್ಲ. ಚಿದಾನಂದ ರೂಪನಾದ ಶಿವನೇ ನಾನು, ಶಿವನೇ ನಾನು ಎಂದು ಹೇಳಿದ್ದಾರೆ.

ಇದು ನಮಗೆ ಚೆನ್ನಾಗಿ ನೆನಪಿದ್ದರೆ ಇವುಗಳ ಮೇಲೆ ಮಮಕಾರವು ಇರುವುದಿಲ್ಲ. ಇವುಗಳ ಕುರಿತು ಜೀವನವನ್ನು ವ್ಯರ್ಥ ಮಾಡಿಕೊಳ್ಳಲಾರಿರಿ. ವಿಚಿತ್ರವೇನೆಂದರೆ ತಪ್ಪದು, ತಪ್ಪದು ಎಂದು ಅದರಲ್ಲಿ ಹೂತು ಹೋಗುತ್ತಿರುತ್ತಾರೆ. ತಪ್ಪದು ಎಂದು ಅಂದುಕೊಳ್ಳುವುದೇಕೆ? ಅದರಲ್ಲಿ ಹೂತು ಹೋಗಿ ಹೂತು ಹೋದೆನು ಎಂದು ಅಂದುಕೊಳ್ಳುವುದು ಏಕೆ?

ಹಾಗೆಯೇ ಬಹಳಷ್ಟು ಜನ ಈ ಪಂಚ ಪ್ರಾಣಗಳೇ ಆತ್ಮವೆಂದು ಅಂದುಕೊಳ್ಳುತ್ತಾರೆ. ಆತ್ಮ ಬೇರೆ, ಪಂಚ ಪ್ರಾಣಗಳು ಬೇರೆ. ಶರೀರದಲ್ಲಿರುವಂತಹ ಐದು ರೀತಿಯಾದ ವಾಯು ಸಂಚಾರಗಳನ್ನೇ ಪಂಚ ಪ್ರಾಣಗಳು ಎನ್ನುತ್ತಾರೆ. ಹಾಗಾಗಿ ಶರೀರದಲ್ಲಿ ಆತ್ಮವು ಇರುವಷ್ಟು ಕಾಲವೇ, ಆತ್ಮ ಶಕ್ತಿಯು ಪಂಚ ಪ್ರಾಣಗಳು ಶರೀರದಲ್ಲಿರುತ್ತವೆ. ಹಾಗಾಗಿ ಆತ್ಮವು ನಿಷ್ಕ್ರಮಿಸಿದರೆ ಈ ಪಂಚ ಪ್ರಾಣಗಳು ಗಾಳಿಯಲ್ಲಿ

ಸೇರಿ ಹೋಗುತ್ತವೆ ಎನ್ನುತ್ತಾರೆ. ಗಾಳಿಯಲ್ಲಿ ಸೇರಿ ಹೋಗುತ್ತವೆ ಎಂದು ಏಕೆ ಹೇಳುತ್ತಾರೆ? ಅಂದರೆ ಗಾಳಿಯು ಗಾಳಿಯಲ್ಲಿ ಸೇರದೇ ಹೋದರೆ ಇನ್ನು ಯಾವುದರಲ್ಲಿ ಸೇರುತ್ತದೆ!.

ಯಾರಾದರೆ ಮರಣಿಸಿದರೆ ಪ್ರಾಣ ಹೋಯಿತು ಎಂದು ಒಂದು ಮಾತನ್ನು ಹೇಳುತ್ತಾರೆ. ಆ ಮಾತು ರೂಢಿಯಾಗಿ ಹೋಗಿದೆ. ಪ್ರಾಣವು ಹೋಯಿತು ಎಂದರೆ ಪ್ರಾಣವೇ ಆತ್ಮ ಎನ್ನುವಂತ ಅಭಿಪ್ರಾಯವು ಬಹಳ ಜನರಲ್ಲಿದೆ. ಆದರೆ ಪಂಚ ಪ್ರಾಣಗಳು ಬೇರೆ, ಆತ್ಮ ಬೇರೆ, ಆತ್ಮಕ್ಕೆ ಈ ಪಂಚ ಪ್ರಾಣಗಳಿಗೆ ಸಂಬಂಧವಿಲ್ಲ. ಇಲ್ಲಿ ಶಂಕರಾಚಾರ್ಯರು ಸ್ಪಷ್ಟವಾಗಿ ಈ ಪಂಚ ವಾಯುಗಳು ನಾನಲ್ಲ ಎಂದು ಹೇಳಿದ್ದಾರೆ.

ಇನ್ನು ಏನು ಹೇಳಿದ್ದಾರೆಂದರೆ ಈ ಸ್ಥೂಲ ದೇಹಕ್ಕೆ ಕಾರಣವಾದಂತಹ ಸಪ್ತಧಾತುಗಳು ನಾನಲ್ಲ. ಇನ್ನು ಪಂಚಕೋಶಗಳು ನಾನಲ್ಲ. ಪಂಚ ಕೋಶಗಳು ಅಂದರೆ ಆತ್ಮದ ಮೇಲಿರುವಂತಹ ಐದು ರೀತಿಯ ಹೊದಿಕೆಗಳು.

ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯವೆಂಬ ಪಂಚ ಕೋಶಗಳು ಕೂಡಾ ನಾನಲ್ಲ ಎಂದಿದ್ದಾರೆ.

ಬಹಳಷ್ಟು ಜನರು ಮರಣಿಸಿದಾಗ ನಾವು ಶರೀರವನ್ನು ಬಿಟ್ಟು ಬಿಡುತ್ತೇವೆ, ಆತ್ಮವು ಮೇಲಕ್ಕೆ ಹೋಗಿ ಬಿಡುತ್ತದೆ ಎಂದುಕೊಳ್ಳುತ್ತಾರೆ. ಆದರೆ ಮೊಟ್ಟಮೊದಲು ಬಿಡುವುದು ಭೌತಿಕ ಶರೀರವನ್ನು, ನಂತರ ಮೂರು ದಿನಗಳಲ್ಲಿ ಬಿದ್ದು ಹೋಗುವುದು ಪ್ರಾಣಮಯ ಶರೀರ, ನಂತರ ಇರುವ ಮೂರು ಶರೀರಗಳಿಂದ ಅಂದರೆ ಮನೋಮಯ, ವಿಜ್ಞಾನಮಯ, ಆನಂದಮಯವೆಂಬ ಮೂರು ಕೋಶಗಳಿಂದ ಆತ್ಮವು ಮೇಲಿನ ಲೋಕಗಳಿಗೆ ಹೋಗುತ್ತದೆ.

ಇವೆಲ್ಲಾ ಸೂಕ್ಷ್ಮ ಶರೀರಗಳು ಕಾಣಿಸುವುದಿಲ್ಲ. ನನ್ನನ್ನು ಬಹಳಷ್ಟು ಜನರು ಕೇಳಿದರು, ಮತ್ತೆ ಇಲ್ಲಿ ನಾವು ಮಾಡಿದ್ದನ್ನು ಮತ್ತೇ ನಾವೇ ಅನುಭವಿಸುತ್ತೇವೆನ್ನುತ್ತಾರಲ್ಲ? ಆತ್ಮಕ್ಕೆ ಇನ್ನೇನು ಇರುವುದಿಲ್ಲವಲ್ಲ? ಎಲ್ಲಾ ಆತ್ಮಗಳೂ ಒಂದೇ ಆದರೆ ಅವರು ಮಾಡಿದ ಕರ್ಮಗಳು ಅವರಿಗೇ ಹೋಗುತ್ತವೆ ಎಂದು ಹೇಗೆ ತಿಳಿಯುತ್ತದೆ? ಎಂದು ಕೇಳುತ್ತಾರೆ.

ಎಲ್ಲಾ ಆತ್ಮಗಳು ಒಂದೇಯಾಗಲಿ, ಆತ್ಮದ ಮೇಲಿರುವಂತಹ ಆ ಹೊದಿಕೆಗಳಿಂದ ಗುರುತು ಹಿಡಿಯಬಲ್ಲರು. ಕೆಲವು ದಿನಗಳು ಅಲ್ಲಿ ಆ ಭುವರ್ ಲೋಕದಲ್ಲೋ, ಸುವರ್ ಲೋಕದಲ್ಲೋ ಇದ್ದ ನಂತರ ಈ ಮನೋ ಮಯ ಕೋಶವನ್ನು ಬಿಡುತ್ತಾರೆ. ಒಟ್ಟಾರೆ

ಆತ್ಮನ ಮೇಲೆ ಈ ಕೋಶಗಳು ಇರುತ್ತವೆ. ಆದ್ದರಿಂದ ಯಾರು ಮಾಡಿದ ಕರ್ಮಗಳು ಅವರ ಖಾತೆಯಲ್ಲಿ ದಾಖಲಾಗುತ್ತವೆ. ಅವನು ಮಾಡಿದ ಪಾಪಗಳು ನನಗೆ ಬಂದರೆ! ನಾನು ಮಾಡಿದ ಪುಣ್ಯಗಳು ಅವರಿಗೆ ಹೋಗಿಬಿಟ್ಟರೆ! ಎಂದು ನೀವೇನೂ ಚಿಂತಿಸಬೇಕಿಲ್ಲ, ಮೇಲೆ ಇಂತಹ ಸಮಸ್ಯೆಗಳೇನೂ ಇರುವುದಿಲ್ಲ.

ನೀವು ಒಳ್ಳೆಯದು ಮಾಡಿದರೆ ಆ ಒಳ್ಳೆಯದು ನಿಮಗೇ ಇರುತ್ತದೆ. ನೀವು ಕೆಟ್ಟದ್ದನ್ನು ಮಾಡಿದರೆ ಆ ಕೆಟ್ಟದ್ದು ನಿಮಗೇ ಇರುತ್ತದೆ. ಆದ ಕಾರಣ ನೀವು ಮಾಡಿದವೇ ನಿಮ್ಮ ಖಾತೆಯಲ್ಲಿ ಇರುತ್ತವೆ. ಅವುಗಳಿಂದಲೇ ಮತ್ತೇ ಕೆಲವುಗಳನ್ನು ಆಯ್ಕೆ ಮಾಡಿಕೊಂಡು ಜನ್ಮ ತೆಗೆದುಕೊಳ್ಳುತ್ತೀರಿ. ಆತ್ಮವನ್ನು ತೆಗೆದುಕೊಂಡಾಗ ಮತ್ತೇ ಈ ಹೊದಿಕೆಗಳನ್ನು ಧರಿಸಿಕೊಂಡು ಭೂಮಿಗೆ ಬಂದು ತಾಯಿಯ ಗರ್ಭದಲ್ಲಿರುವ ಶರೀರದಲ್ಲಿ ಪ್ರವೇಶಿಸುತ್ತೀರಿ. ಭೌತಿಕ ಶರೀರವನ್ನು ತಾಯಿ ತಯಾರು ಮಾಡುತ್ತಾಳೆ. ಹಾಗೆ ಜನ್ಮವನ್ನು ತೆಗೆದುಕೊಳ್ಳುತ್ತೀರಿ. ಇಲ್ಲಿ ಭೌತಿಕ ಶರೀರವೇ ಕಾಣಿಸುತ್ತದೆಯೇ ಹೊರತು ಉಳಿದ ಶರೀರಗಳು ಕಾಣಿಸುವುದಿಲ್ಲ. ಆದ್ದರಿಂದ ಸಹಜವಾಗಿ ಎಲ್ಲರು ಇನ್ನೇನು ಇಲ್ಲವೇನೋ ಎಂದುಕೊಳ್ಳುತ್ತಾರೆ.

ಆದರೆ ಪತ್ರೀಜಿಯವರು ಭೌತಿಕ ಶರೀರವಲ್ಲದೆ ಇನ್ನೂ 6 ಶರೀರಗಳು ಇವೆಯೆಂದು ಹೇಳುತ್ತಾರೆ. ಆದರೆ ಶಂಕರಾಚಾರ್ಯರು ಈ ಕಾರಣ ಶರೀರ, ಮಹಾಕಾರಣ ಶರೀರ ಇಷ್ಟು ಮಾತ್ರವೇ ಹೇಳುತ್ತಾರೆ. ಮಹಾಕಾರಣ ಶರೀರದಲ್ಲಿ ಭಾಗಗಳಿವು. ಮಹಾಕಾರಣ ಶರೀರದಲ್ಲಿ ಆ ನಿರ್ವಾಣಮಯ ಶರೀರದ ಸ್ಥಾಯಿಗೆ ಹೋದರೆ ಇನ್ನು ಯಾವ ಗುರುತು ಇರುವುದಿಲ್ಲ, ಆದರೆ ಅದನ್ನು ಕೂಡಾ ಬಿಟ್ಟ ನಂತರವೇ ಮೋಕ್ಷವನ್ನು ಹೊಂದುವುದು, ಜನ್ಮರಾಹಿತ್ಯ ಸ್ಥಿತಿಯನ್ನು ಸಾಧಿಸುವುದು.

ಅದೇ ನಮಗೆ ತಿಳಸೀ ದಳ–1 ಪುಸ್ತಕದಲ್ಲಿ ಪಂಚ ವಿಂಶತಿ ಎಂಬ ವಿಷಯದಲ್ಲಿ ಪತ್ರೀಜಿಯವರು ಹೇಳಿದ್ದಾರೆ. ತುಳಸೀ ದಳ ಎಂಬುದು ಸಾಮಾನ್ಯ ಪುಸ್ತಕವಲ್ಲ, ಅದ್ಭುತವಾದ ಜ್ಞಾನವನ್ನು ಕೊಡಬಲ್ಲ ಪುಸ್ತಕ. ಅದಕ್ಕೆ ಪತ್ರೀಜಿಯವರು ಹೇಳಿದ್ದಾರೆ, ನೀವು ಜ್ಞಾನವಂಚಿತರಾದರೇನೇ ಇನ್ನೊಬ್ಬ ಜ್ಞಾನಿಯು ಅರ್ಥವಾಗುತ್ತಾನೆ. ನೀನು ಡಿಗ್ರಿಯೊಳಗೆ ಬಂದರೇನೇ ಪೋಸ್ಟ್ ಗ್ರಾಡ್ಯೂಯೇಷನ್ ಸ್ಟೂಡೆಂಟ್ ಅರ್ಥವಾಗುತ್ತಾನೆ. ನೀನು ಐದನೇಯ ತರಗತಿಯಲ್ಲಿದ್ದರೆ ಪೋಸ್ಟ್ ಗ್ರಾಡ್ಯೂಯೇಷನ್ ವಿದ್ಯಾರ್ಥಿಯು ಹೇಗೆ ಅರ್ಥವಾಗುತ್ತಾನೆ? ನೀನು ಪೋಸ್ಟ್ ಗ್ರಾಡ್ಯೂಯೇಷನ್‌ಗೆ ಬಂದರೇನೇ ಪಿ.ಹೆಚ್.ಡಿ.ಯವನು ನಿನಗೆ ಅರ್ಥವಾಗುತ್ತಾನೆ, ಇದೂ ಅಷ್ಟೇ.

ಆದಕಾರಣ ಇವು ಏನು ನಾನಲ್ಲ ಎಂದು ನೀವು ತಿಳಿದುಕೊಳ್ಳಬೇಕು, ಇವೆಲ್ಲಾ ಈಗ ಇವೆ. ಕೆಲವು ದಿನಗಳಿಗೆ ಇವೆಲ್ಲಾ ಹೋಗುತ್ತವೆ. ಹೋಗುವವನ್ನು ನೀನು ಹೇಗೆ ತಡೆಯಬಲ್ಲೇ? ಶಾಶ್ವತವಾದಂತಹ ಆ ಶಿವನು ಅಂದರೆ ಆ ಪರಬ್ರಹ್ಮನು ನೀನೇ, ಇವುಗಳೊಂದಿಗೆ ನಿನಗೆ ಸಂಬಂಧವಿಲ್ಲ.

ಇದನ್ನು ಅರ್ಥ ಮಾಡಿಕೊಂಡವನು ಇವುಗಳಿಗೆ ಕಡಿಮೆ ಪ್ರಾಮುಖ್ಯತೆಯನ್ನು ಕೊಡುತ್ತಾನೆ. ತನಗೆ ಅಂದರೆ ಆತ್ಮಕ್ಕೆ ಪ್ರಾಮುಖ್ಯತೆಯನ್ನು ಕೊಡುತ್ತಾನೆ. ಹೀಗೆ ಕೊಟ್ಟವರು ಕೊನೆಯ ಜನ್ಮಕ್ಕೆ ಬಂದಂತೆಯೇ.

ನೀನು ತಪ್ಪದು, ತಪ್ಪದು ಎಂದುಕೊಂಡರೆ ಇನ್ನೂ ಕೆಲವು ಜನ್ಮಗಳನ್ನು ತೆಗೆದುಕೊಳ್ಳುವೆ. ಯಾರೇನು ಮಾಡುತ್ತಾರೆ, ನಿನಗೆ ಅದೇ ಚೆನ್ನಾಗಿದ್ದರೆ ಅದನ್ನೇ ತೆಗೆದುಕೊಳ್ಳುವೆ. ಪತ್ರೀಜಿಯವರು ಕೂಡಾ ಹೇಳಿದ್ದಾರೆ ಏನೂ ಅವಸರವಿಲ್ಲ, ನಿನಗೆ ತೃಪ್ತಿ ತೀರದೇ ಹೋದರೆ ಎಷ್ಟು ಜನ್ಮಗಳನ್ನಾದರೂ ತೆಗೆದುಕೋ, ತಪ್ಪೇನೂ ಇಲ್ಲ, ಶುಭ್ರವಾಗಿ ಅನುಭವಿಸು, ಎಂಜಾಯ್ ಮಾಡು, ಭೂಮಿಯ ಮೇಲಿರುವ ನವರಸಗಳನ್ನೆಲ್ಲಾ ಅನುಭವಿಸು.

ಆ ಮೋಜುಗಳೆಲ್ಲಾ ತೀರಿದ ಮೇಲೆ, ಇದರಲ್ಲಿ ಏನೂ ಇಲ್ಲ ಎಂದು ಅನ್ನಿಸಿದ ನಂತರ ಇದರಲ್ಲಿ ನೀನೇ ಬರುವೆ. ಒಂದು ರೀತಿಯಲ್ಲಿ ಹೇಳಬೇಕೆಂದರೆ ನೀವೆಲ್ಲರೂ ಆ ಸ್ಥಾಯಿಗೆಬಂದವರೇ, ಅದಕ್ಕೆ ಇದರೊಳಗೆ ಬಂದಿದ್ದೀರಿ.

ಆದರೆ ತಪ್ಪುತ್ತಿಲ್ಲ ಅಂದರೆ ಇರಬೇಕೆಂದು ಇದೆ, ತಪ್ಪಿತು ಅಂದರೆ ಇರಬೇಕೆಂದು ಇಲ್ಲ. ಇರಬೇಕೆಂದು ಕೊಂಡವನಿಗೆ ಮೋಕ್ಷವು ಬರುವುದಿಲ್ಲ. ಇನ್ನೂ ಇರಬೇಕೆಂದು ಇಲ್ಲದವನಿಗೇ ಮೋಕ್ಷವು ಬರುತ್ತದೆ. ಅದನ್ನೇ ಮುಮುಕ್ಷತ್ವ ಎನ್ನುತ್ತಾರೆ.

ಶಂಕರಾಚಾರ್ಯರಿಗೆ ಅವರ ತಾಯಿ ಹೇಳಿದರು, ಓ ಮಗುವೇ .. ಮದುವೆ ಮಾಡಿಕೊಂಡು, ಮಕ್ಕಳನ್ನು ಹೆತ್ತು, ಹಾಯಾಗಿ ಇರಬಹುದಲ್ಲಾ? ಏಕಪ್ಪಾ ಈ ಕಷ್ಟಗಳೆಲ್ಲಾ ಎಂದು. ಆಗ ಆತನು ನನಗೇನು ಬೇಕಿಲ್ಲಮ್ಮ, ನನಗೆ ಇವುಗಳ ಅಗತ್ಯವಿಲ್ಲ, ಅವುಗಳಿಗಾಗಿ ನಾನು ಭೂಮಿ ಮೇಲೆ ಬಂದಿಲ್ಲವೆಂದು ಹೇಳಿದನು. ಮತ್ತೇ ಎಷ್ಟೋ ಜನರಿಗೆ ಆತನು ಜ್ಞಾನವನ್ನು ಕೊಟ್ಟನು.

ತಪ್ಪುತ್ತಿಲ್ಲ ಎಂದುಕೊಂಡವರೆಲ್ಲಾ ಮದುವೆ ಮಾಡಿಕೊಳ್ಳುತ್ತಿದ್ದಾರೆ. ಆದರೆ ನಂತರ ಕಷ್ಟಗಳು ಬಂದಾಗ ಏನೋ ದೇವರಿಗೆ ನನ್ನ ಮೇಲೆ ದಯೆ ಇಲ್ಲ. ಸಣ್ಣ ನೋಟ ನೋಡಿ,

ಎಷ್ಟು ಕಷ್ಟಗಳನ್ನು ಇಡುತ್ತಿದ್ದಾನೋ? ಎನ್ನುತ್ತಾರೆ. ಇನ್ನೂ ಇಂತಹ ಹೆಂಡತಿಯನ್ನು ಕೊಟ್ಟಿದ್ದಾನೆ, ಇಂತಹ ಗಂಡನನ್ನು ಕೊಟ್ಟಿದ್ದಾನೆ ಎನ್ನುತ್ತಾರೆ. ಮಾಡಿಕೊಳ್ಳುವಾಗ ಚೆನ್ನಾಗಿಯೇ ಮಾಡಿಕೊಳ್ಳುತ್ತಾರೆ ತಪ್ಪುತ್ತಿಲ್ಲವೆಂದು. ನಂತರ ದೇವರ ಮೇಲೆ ತಳ್ಳುತ್ತಾರೆ.

ಅಂದರೆ ಮಾಡಿಕೊಳ್ಳುವವರಿಗೆ ಬೆಲ್ಲ, ಮಾಡಿಕೊಂಡ ಮೇಲೆ ಅಲ್ಲ (ಶುಂಠಿ). ನೀನು ನನಗೆ ಬೇಕಿಲ್ಲ ಹೋಗಿಬಿಡು ಎನ್ನುತ್ತಾರೆ. ಅದೇ ಹೆಣ್ಣು ಮಕ್ಕಳಾದರೆ ನಾನು ನಿನ್ನ ಜೊತೆ ಇರುವುದಿಲ್ಲ, ತವರು ಮನೆಗೆ ಹೋಗಿ ಬಿಡುತ್ತೇನೆ ಎನ್ನುತ್ತಾರೆ.

ಆದ್ದರಿಂದ ಶಂಕರಾಚಾರ್ಯರು ಏನು ಹೇಳಿದ್ದಾರೆಂದರೆ ಮಗು, ಇವು ಯಾವುವೂ ನೀನಲ್ಲಾ, ಚಿದಾನಂದ ಸ್ವರೂಪನಾದಂತಹ ಆ ಪರಬ್ರಹ್ಮನೇ ನೀನು. ಇದನ್ನು ಅರ್ಥ ಮಾಡಿಕೋ, ಇವೆಲ್ಲಾ ನೀನು ಎಂದುಕೊಳ್ಳುತ್ತಾ ಇವುಗಳಲ್ಲಿ ಹೂತು ಹೋಗುತ್ತಿರುವೆ, ನಿಜಕ್ಕೂ ಇವುಗಳೊಂದಿಗೆ ನಿನಗೆ ಯಾವ ಸಂಬಂಧವಿಲ್ಲವೆಂದು ಹೇಳುತ್ತಿದ್ದಾರೆ.

*****

**ತೀವ್ರಾತಿ ತೀವ್ರವಾದ ಪುರುಷ ಪ್ರಯತ್ನದಿಂದಲೇ**
**ಜೀವನು ದೇವನಾಗಿ ಬದಲಾಗುತ್ತಾನೆ.**
**'ವಸಿಶಿಷ್ಟರು'**

**ಸದ್ಗುರು ಬೋಧಿಸಿದ ಜ್ಞಾನವನ್ನು**
**ಆಚರಿಸಬೇಕೆಂದರೆ**
**'ಪ್ರಾಪಂಚಿಕವಾದವೆಲ್ಲವು ಅಶಾಶ್ವತ' ವೆಂಬ**
**ಸತ್ಯವನ್ನು ತಿಳಿದುಕೊಳ್ಳಬೇಕು.**
**'ಬ್ರಹ್ಮರ್ಷಿ' ತಟವರ್ತಿ ವೀರರಾಘವರಾವ್**

**ಆತ್ಮಜ್ಞಾನಿಗೆ ಪ್ರಾಪಂಚಿಕವಾದ ಕೋರಿಕೆಗಳು, ಅಧಿಕಾರಗಳು,**
**ಪ್ರೇಮ, ಕರ್ತವ್ಯಗಳಂತವುಗಳ ಮೇಲೆ ಆಸಕ್ತಿ ಇರದು**
**ಎಲ್ಲಿಯೂ ಸ್ವಾರ್ಥವನ್ನು ಪ್ರದರ್ಶಿಸನು.**
**'ಮೇಡಂ ಬ್ಲಾವಟ್ಸ್ಕಿ'**

# 'ಶಂಕರಾಚಾರ್ಯರು ಹೇಳಿದ ಮೂರನೇ ಶ್ಲೋಕ'

ಮಾನವನ ಶರೀರದಲ್ಲಿ ಯಾವುವು ಬ್ರಹ್ಮವಲ್ಲವೆಂದು ಆರು ಶ್ಲೋಕಗಳಲ್ಲಿ ಅವರು ವಿವರಿಸಿದ್ದಾರೆ. ಅವುಗಳನ್ನೇ ನಿರ್ವಾಣಷಟ್ಕಂ ಎಂದಿದ್ದಾರೆ. ನಾವು ಅದರಲ್ಲಿ ಈಗ ಮೂರನೇ ಶ್ಲೋಕವನ್ನು ತಿಳಿಯೋಣ.

**ಶ್ಲೋಕ ॥ ನಮೇ ದ್ವೇಷರಾಗೌ ನ ಮೇ ಲೋಭ ಮೋಹೌ**
**ಮದೋ ನೈವ ಮೇ ನೈವ ಮಾತ್ಸರ್ಯ ಭಾವಃ**
**ನ ಧರ್ಮೋ ನ ಚಾರ್ಥೋ ನ ಕಾಮೋ ನ ಮೋಕ್ಷಃ**
**ಚಿದಾನಂದ ರೂಪಃ ಶಿವೋಹಂ, ಶಿವೋಹಂ॥**

**ತಾತ್ಪರ್ಯ :** ರಾಗ ದ್ವೇಷಗಳಾಗಲಿ, ಲೋಭ ಮೋಹಗಳಾಗಲಿ ನಾನು ಅಲ್ಲ. ಮದಮಾತ್ಸರ್ಯಗಳು ನಾನು ಅಲ್ಲ. ಇವು ಪಾಂಚ ಭೌತಿಕ ಅಂತಃಕರಣಗಳಿಗೆ ಸಂಬಂಧಿಸಿದವು. ನಾನು ಸರ್ವಾತ್ಮಕನು, ನಿತ್ಯ ಮುಕ್ತನು. ಆದಕಾರಣ ನನಗೆ ಪುರುಷಾರ್ಥಗಳೆಂದು ಹೇಳಲ್ಪಡುವ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬವು ಇಲ್ಲವೇ ಇಲ್ಲ. ಚಿದಾನಂದ ರೂಪನಾದ ಶಿವನೇ ನಾನು, ಶಿವನೇ ನಾನು.

ಇಲ್ಲಿ ರಾಗ ದ್ವೇಷಗಳಾಗಲಿ, ಲೋಭ ಮೋಹಗಳಾಗಲಿ ನಾನು ಅಲ್ಲ, ಎಂದಿದ್ದಾರೆ. ಇಲ್ಲಿ ನೋಡಿ, ಮಾನವರಿಗೆ ಸಹಜವಾಗಿ ಈ ರಾಗದ್ವೇಷಗಳು, ಲೋಭ ಮೋಹಗಳು ಇರುತ್ತವೆ. ರಾಗವು ಅಂದರೆ ಇತರರ ಬಗ್ಗೆ ದ್ವೇಷ, ತನ್ನ ಮತದ ಬಗ್ಗೆ ಅನುರಾಗವು ಇತರ ಮತಗಳ ಬಗ್ಗೆ ದ್ವೇಷ. ತನ್ನ ಕುಲದ ಬಗ್ಗೆ ಅನುರಾಗ, ಇತರ ಕುಲಗಳ ಬಗ್ಗೆ ದ್ವೇಷ. ತನ್ನ ದೇಶದ ಬಗ್ಗೆ ಅನುರಾಗವು, ಇತರ ದೇಶಗಳ ಬಗ್ಗೆ ದ್ವೇಷವು ಇರುತ್ತದೆ.

ಈ ರೀತಿಯಾದ ರಾಗದ್ವೇಷಗಳು ಯಾರಲ್ಲಿ ಇರುತ್ತವೆಯೋ ಅವರು ನಾನು ಬ್ರಹ್ಮವು ಎಂದು ತಿಳಿದುಕೊಂಡಿಲ್ಲವೆಂದು ಲೆಕ್ಕ. ಇವುಗಳಲ್ಲಿ ನೀವು ಯಾವನ್ನು ಪ್ರದರ್ಶಿಸುತ್ತಿದ್ದರೂ ನಾನು ಬ್ರಹ್ಮವು ಅಂದರೆ ನಾನು ಆತ್ಮನು ಎಂಬ ಸ್ಥಿತಿಗೆ ಬಂದಿಲ್ಲವೆಂದೇ ಲೆಕ್ಕ. ಬಹಳಷ್ಟು ಜನರು ಆತ್ಮ ಸ್ಥಿತಿಗೆ ಬರುವುದು ಅಂದರೇನು? ಆತ್ಮವಾಗಿ ಜೀವಿಸುವುದು ಅಂದರೇನು? ಎಂದು ಕೇಳುತ್ತಾರೆ.

ನೀವು ಒಂದುಬಾರಿ ಈ ನಿರ್ವಾಣ ಷಟ್ಕದಲ್ಲಿರುವ ಆರು ಶ್ಲೋಕಗಳನ್ನು ಓದಿ, ಈ ಆರು ಶ್ಲೋಕಗಳಲ್ಲಿ ಶಂಕರಾಚಾರ್ಯರು ಬೋಧಿಸಿದಂತೆ, ಆತನು ಹೇಳಿದವುಗಳು ಯಾವುವು ನಾನಲ್ಲ ಎನ್ನುವಂತೆ ನೀವು ಜೀವಿಸಿದರೆ, ಆ ಲಕ್ಷಣಗಳು ನಿಮ್ಮಲ್ಲಿ ಇಲ್ಲದಿದ್ದರೆ ನೀವು ಆತ್ಮನಂತೆ ಜೀವಿಸಿದಂತೆ! ಆತ್ಮ ಸ್ಥಿತಿಯಲ್ಲಿ ಇದ್ದಂತೆಯೇ! ನೀವು ಬ್ರಹ್ಮವಾಗಿ ಬೆಳೆದಂತೆಯೇ!.

ಎಷ್ಟು ದಿನ ಧ್ಯಾನ ಮಾಡಿದರೂ, ಎಷ್ಟು ಜ್ಞಾನವನ್ನು ಹೊಂದಿದರೂ ಇನ್ನೂ ಈ ರೀತಿಯಾದ ಲಕ್ಷಣಗಳು ನಿಮ್ಮಲ್ಲಿ ಇದ್ದರೆ ನೀವು ಆ ಸ್ಥಿತಿಗೆ ಬೆಳೆಯದಂತೆಯೇ. ನೀವು ಇನ್ನು ನಾನು ಆತ್ಮನು ಅಂದರೆ ನಾನು ಬ್ರಹ್ಮನು, ನಾನು ಶಿವನು ಎಂದು ತಿಳಿದುಕೊಂಡಿಲ್ಲವೆಂದೇ ಲೆಕ್ಕ, ಆ ಅರಿವಿಗೆ ಬಂದಿಲ್ಲವೆಂದೇ ಲೆಕ್ಕ. ಆದ್ದರಿಂದ ನಿಮ್ಮ ಸಾಧನೆ, ನಿಮ್ಮ ಜ್ಞಾನವನ್ನು ಇನ್ನೂ ಹೆಚ್ಚಿಸಿಕೊಳ್ಳಬೇಕು.

ಬಹಳಷ್ಟು ಜನ ಏನೋ ಕೆಲವು ಅನುಭವಗಳು ಬಂದರೆ ಎಷ್ಟೋ ಬೆಳೆದು ಬಿಟ್ಟಿದ್ದೇನೆಂದುಕೊಳ್ಳುತ್ತಾರೆ. ಕಣ್ಣು ಮುಚ್ಚಿಕೊಂಡಾಗ ಒಂದು ಮರವೋ, ಒಂದು ಹುತ್ತವೋ ಕಾಣಿಸಿದರೆ ತಕ್ಷಣವೇ ನನಗೆ 3ನೇ ಕಣ್ಣು ಕ್ರಿಯಾಶೀಲವಾಗಿದೆ ಎಂದು ಎಲ್ಲರಿಗೂ ಹೇಳಿಬಿಡುತ್ತಾರೆ. ಈ ಹುಚ್ಚು ಜನರೂ ಕೂಡಾ ಅವನು ಥರ್ಡ್ ಐ ಮಾಸ್ಟರೆಂದು ಅವನಿಗೆ ಬಿರುದನ್ನು ಕೊಟ್ಟುಬಿಡುತ್ತಾರೆ.

ಯಾರಾದರೂ ನೀವು ಎಷ್ಟು ಬೆಳೆದು ಬಿಟ್ಟಿದ್ದೀರಿ ಕಣ್ರೀ! ದಿನಲೂ ಎಷ್ಟು ಗಂಟೆಗಳ ಕಾಲ ಧ್ಯಾನವನ್ನು ಮಾಡುತ್ತಿದ್ದೀರಿ? ಎಂದು ಆಕೆಯ ಬಳಿಗೆ ಹೋಗಿ ಕೇಳಿದರೆ ಥರ್ಡ್ ಐ ಮಾಸ್ಟರ್ ಆಗಿ ಹೋದಂತೆ ಆಕೆಯು ಇನ್ನು ಭಂಗಿಗಳನ್ನು ಕೊಡಲು ಪ್ರಾರಂಭಿಸುತ್ತಾಳೆ. ಆಕೆಯಲ್ಲಿ ಈ ಲಕ್ಷಣಗಳೇನಾದರೂ ಬಂದಿವೆಯೇ ಎಂದು ನೋಡಿಕೊಳ್ಳುವುದಿಲ್ಲ.

ಇಲ್ಲಿ ಥರ್ಡ್ ಐ ಬಂದರೂ ಕೂಡಾ ಇತರರಿಗೆ ಏಕೆ ಹೇಳಬೇಕು? ಹೇಳಿದ್ದಾಳೆ ಎಂದರೆ ನನಗೇ ಬಂದಿದೆ ಎಂಬ ಗರ್ವವನ್ನು ಪ್ರದರ್ಶಿಸಿದ್ದಾಳೆ, ಯಾರಿಗೂ ಬಂದಿಲ್ಲವೆಂಬ ಗರ್ವದಿಂದ ಹೇಳಿದ್ದಾಳೆ. ನಿಜವಾಗಿಯೂ ಥರ್ಡ್ ಐ ಬಂದರೂ ಹಾಗೆ ಬಹಿರಂಗಪಡಿಸದೇ ಯಾರಾದರೆ ಇರುತ್ತಾರೋ ಅವರಲ್ಲಿ ಗರ್ವ ಇಲ್ಲದಂತೆ. ನೆನಪಿಟ್ಟುಕೊಳ್ಳಿ, ಹಿಂದಿನ ಜನ್ಮಗಳನ್ನು ನೋಡಿ ಕೊಂಡಿದ್ದಾರೆ, ಹೇಳಬೇಕಾದ ಕೆಲಸವೇನಿದೆ? ಇತರರಿಗೆ ಹೇಳಿದ ಮಾತ್ರಕ್ಕೆ ಈಕೆಗೆ ಒದಗಿ ಬಂದದ್ದಾರೂ ಏನು?.

ಹಾಗೆ ಹೇಳುವುದರಿಂದ ಇತರರಿಗೆ ಬರುವ ಲಾಭವೇನು? ಆಲೋಚಿಸಿರಿ! ಒಂದು ವೇಳೆ ಬಂದರೆ ಅದನ್ನು ಉಪಯೋಗಿಸಿ ಜ್ಞಾನವನ್ನು ಬೆಳೆಸಿಕೊಳ್ಳಬೇಕು. ಥರ್ಡ್ ಐ ಅಂದರೆ ನೀನು ಇರುವ ಕಡೆಯೇ ಕುಳಿತುಕೊಂಡು ಸೃಷ್ಟಿಯಲ್ಲಿರುವಂತ ಎಷ್ಟೋ ಲೋಕಗಳನ್ನು ನೋಡಬಹುದು, ಎಷ್ಟೋ ಜನರನ್ನು ನೋಡಬಹುದು, ಎಷ್ಟೋ ವಿಷಯಗಳನ್ನು ತಿಳಿದು ಕೊಳ್ಳಬಹುದು. ಸಹಜವಾದ ಕಣ್ಣುಗಳಿಗೆ ತಿಳಿಯದಂತಹ ಎಷ್ಟೋ ಜ್ಞಾನವನ್ನು ಸಂಪಾದಿಸಿಕೊಳ್ಳಬಹುದು. ಅದನ್ನು ಸಂಪಾದಿಸಿಕೋ! ಹೇಳಿಕೊಳ್ಳುವುದರಿಂದ ಏನೂ ಉಪಯೋಗವಿಲ್ಲ. ಇದನ್ನೇ ಗರ್ವವು ಎನ್ನುತ್ತಾರೆ.

ಒಂದು ವೇಳೆ ಯಾರಿಗಾದರೂ ಬಂದು ನಿನಗೆ ಬರದಿದ್ದರೆ ಅಸೂಯೆ ಪಟ್ಟೆ ಎಂದರೆ ಇನ್ನೂ ನೀನು ಬೆಳೆದಂತೆಯೇ ಲೆಕ್ಕ. ಯಾರಿಗೆ ಇದ್ದರೆ ನಿನಗೇನು? ಅವರಿಗೆ ಹಣವಿದ್ದರೆ ನಿನಗೇಕೆ? ಅವಾರ್ಡ್ ಬಂದರೆ ನಿನಗೇಕೆ? ಅವರು ಮಹಲನ್ನು ಕಟ್ಟಿಕೊಂಡರೆ ನಿನಗೇಕೆ? ಕಾರು ಕೊಂಡು ಕೊಂಡರೆ ನಿನಗೇನು? ಅವರೊಂದಿಗೆ ನಿನಗೇನು ಸಂಬಂಧ? ನೀನು ಬ್ರಹ್ಮವು. ಸಮಸ್ತವೂ ನೀನೇ! ಈ ಸೃಷ್ಟಿಯಲ್ಲಿ ನೀನು ಆಗದಿರುವಂತಾದ್ದು ಯಾವುದೂ ಇಲ್ಲ. ಎಲ್ಲವೂ ನಿನ್ನಿಂದಲೇ ಉದ್ಭವಿಸಿವೆ, ಅವರಿಗಿದೆ, ನನಗೆ ಇಲ್ಲ ಎಂಬ ಭಾವದಲ್ಲಿ ಇರುವೆ ಅಂದರೆ ಇನ್ನೂ ಏನು ಬೆಳೆದಿಲ್ಲ. ಆತ್ಮ ಸ್ಥಿತಿಯಲ್ಲಿ ಇಲ್ಲ, ದೇಹ ಸ್ಥಿತಿಯಲ್ಲಿಯೇ ಇರುವೆ.

ಮತ್ತೆ ಲೋಭವಿದ್ದರೆ ಯಾವುದಕ್ಕೂ ಖರ್ಚು ಮಾಡುವುದಿಲ್ಲ, ಜ್ಞಾನವನ್ನು ಹೆಚ್ಚಿಸುವ ಪುಸ್ತಕಗಳನ್ನು ಕೊಳ್ಳುವುದಕ್ಕೆ ಕಕ್ಕುಲಾತಿ, ಯಾರಿಗಾದರೂ ಏನಾದರೂ ಕೊಡುವುದಕ್ಕೂ ಕಕ್ಕುಲಾತಿ, ಮೋಹ ಅಂದರೆ ವ್ಯಾಮೋಹ. ಅದರ ಮೇಲೆ ವ್ಯಾಮೋಹ, ಇದರ ಮೇಲೆ ವ್ಯಾಮೋಹ, ಎಲ್ಲದರ ಮೇಲೆ ವ್ಯಾಮೋಹವೇ, ಯಾವುದನ್ನು ನೋಡಿದರೂ ಅದನ್ನು ಹೊಂದಬೇಕೆಂಬ ವ್ಯಾಮೋಹ. ಇಂತಹ ಲಕ್ಷಣಗಳು ನಿನ್ನಲ್ಲಿ ಇದ್ದರೆ ಇನ್ನೂ ಆತ್ಮಸ್ಥಿತಿಗೆ ಬಂದಿಲ್ಲವೆಂದು ತಿಳಿದುಕೊಳ್ಳಬೇಕು. ನಾನು ಬ್ರಹ್ಮನು ಎಂಬ ವಿಷಯವು ಇನ್ನೂ ನಿನ್ನ ಅರಿವಿಗೆ ಆಗಿಲ್ಲವೆಂದು ಅರ್ಥ.

ನಿರ್ವಾಣ ಷಟ್ಕದಲ್ಲಿ ಶಂಕರಾಚಾರ್ಯರು ಹೇಳಿದವುಗಳಲ್ಲಿ ಕನಿಷ್ಟ ಒಂದನ್ನಾದರೂ ಆಚರಿಸುತ್ತಿದ್ದೇವೆಯೇ? ಮತ್ತೆ ಅಷ್ಟು ಲಕ್ಷಣಗಳು ನಿಮ್ಮಲ್ಲಿ ಇದ್ದರೆ ನೀವು ಆತ್ಮವಾಗಿ ಎಲ್ಲಿ ಬೆಳೆದಂತೆ? ಇನ್ನೂ ದೇಹವಾಗಿ ಇದ್ದಂತೆಯೇ. ಇನ್ನು ಎಷ್ಟು ಜನ್ಮಗಳು ಹಿಡಿಯುತ್ತದೆಯೋ!.

ಆದ್ದರಿಂದ ಇವೆಲ್ಲಾ ನಿನಗೆ ಸಂಬಂಧಿಸಿದವು ಅಲ್ಲ. ನೀನು ಬ್ರಹ್ಮನು ಎಂದು ಇವು ಪಾಂಚ ಭೌತಿಕ ಅಂತಃಕರಣಗಳಿಗೆ ಸಂಬಂಧಿಸಿದವು ಎಂದು ಶಂಕರಾಚಾರ್ಯರು ಹೇಳಿದ್ದಾರೆ. ಪಂಚ ಭೂತಗಳಿಗೆ ಸಂಬಂಧಿಸಿದ ಈ ಶರೀರವೊಂದರ ಅಂತಃಕರಣ ಅಂದರೆ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ ಇವುಗಳಿಗೆ ಸಂಬಂಧಿಸಿದವೇ ಇವೆಲ್ಲಾ, ಅದಕ್ಕಿಂತ ಇನ್ನೇನೂ ಅಲ್ಲ.

ಶರೀರವನ್ನು ಬಿಟ್ಟರೆ ಇವೆಲ್ಲವು ಗಾಳಿಯಲ್ಲಿ ಸೇರಿಹೋಗುತ್ತವೆ. ಯಾವುವೂ ಇರುವುದಿಲ್ಲ. ಅವೆಲ್ಲವನ್ನು ನೀನು ಪ್ರದರ್ಶಿಸುತ್ತಿರುವೆ. ನೀನು ಇನ್ನು ಆತ್ಮಸ್ಥಿತಿಗೆ ಎಲ್ಲಿ ಬೆಳೆದಿರುವೆ? ಆತ್ಮವಾಗಿ ಎಲ್ಲಿ ಜೀವಿಸುತ್ತಿರುವೆ? ಅವೆಲ್ಲಾ ನಾನಲ್ಲ, ನಾನು ಸರ್ವಾತ್ಮಕನು, ಸರ್ವತ್ರ ವ್ಯಾಪಿಸಿ ಇರುವ ಆತ್ಮನೇ ನಾನು. ನಿತ್ಯ ಮುಕ್ತನು ಅಂದರೆ ನನಗೆ ಮುಕ್ತಿಯೇನು ಅಗತ್ಯವಿಲ್ಲ.

ಇವೆಲ್ಲವು ನೀನು ಅಂದುಕೊಂಡಾಗ, ಇವನ್ನು ನೀನು ಪ್ರದರ್ಶಿಸುತ್ತಾ ಇದ್ದರೆ ನಿನಗೆ ಮುಕ್ತಿ ಬೇಕು. ಇವುಗಳೊಂದಿಗೆ ನನಗೆ ಸಂಬಂಧವಿಲ್ಲ ಎಂಬುವ ಸ್ಥಿತಿಗೆ ನೀನು ಬಂದ ಮೇಲೆ ಇನ್ನು ನಿನಗೆ ಮುಕ್ತಿ ಏಕೆ?

ಆತ್ಮನಾದ ನಿನಗೆ ಮುಕ್ತಿಯೇನು? ನಿತ್ಯ ಮುಕ್ತನು. ಅದು ತಿಳಿದು ಕೊಳ್ಳಲಾರದೆ ನನಗೆಲ್ಲಾ ಕಷ್ಟಗಳು, ನನಗೇ ಎಲ್ಲಾ ನೋವುಗಳು, ನನಗೇ ಎಲ್ಲಾ ಸಮಸ್ಯೆಗಳು, ನನಗೇ ಎಲ್ಲಾ ತೊಂದರೆಗಳು ಎಂದು ದುಃಖಿಸುತ್ತಿರುವೆ.

ಹಾಗೆಯೇ ಪುರುಷಾರ್ಥಗಳು ಎನ್ನುವ ಧರ್ಮ, ಅರ್ಥ, ಕಾಮ, ಮೋಕ್ಷ ಎನ್ನುವವು ನನಗೆ ಇಲ್ಲವೇ ಇಲ್ಲ. ಅವುಗಳೊಂದಿಗೆ ನನಗೆ ಸಂಬಂಧವಿಲ್ಲ, ನಾನು ಚಿದಾನಂದ ರೂಪನಾದ ಶಿವನು, ಬ್ರಹ್ಮನು, ಆತ್ಮನು.

ಆದ್ದರಿಂದ ಯಾವಾಗಲೂ ಆನಂದದಿಂದ ಇರುವವನು, ದುಃಖಪಡುವವನು ಅಲ್ಲ. ದುಃಖದಲ್ಲೂ ಕೂಡಾ ಆನಂದದಿಂದ ಇರುವವನು ಎಂಬ ಸ್ಥಿತಿಗೆ ಸೇರಿಕೊಳ್ಳಬೇಕು. ಬ್ರಹ್ಮವಾದ ನಿನಗೆ ದುಃಖವೇಕೆ? ಇವುಗಳೊಂದಿಗೆ ನಿನಗೆ ಸಂಬಂಧವೇನು? ಇವೆಲ್ಲವು ನನ್ನವೆಂದುಕೊಳ್ಳುತ್ತಾ, ಇವರೆಲ್ಲಾ ನನ್ನವರೆಂದುಕೊಳ್ಳುತ್ತಾ ದುಃಖಪಡುತ್ತಿರುವೆ, ನಿಜವಾಗಿಯೂ ಇವುಗಳೊಂದಿಗೆ ನಿನಗೆ ಸಂಬಂಧವೇ ಇಲ್ಲ.

ಯಾವ ಶರೀರಕ್ಕಾಗಿಯಾದರೆ ಇಷ್ಟು ಹಂಬಲ ಪಡುತ್ತಿರುವೆಯೋ, ಕಷ್ಟ ಪಡುತ್ತಿರುವೆಯೋ, ಆ ಶರೀರವೇ ನೀನು ಅಲ್ಲ. ಶರೀರಕ್ಕೆ ಸಂಬಂಧಿಸಿದ ಮನಸ್ಸು, ಬುದ್ಧಿ,

ಚಿತ್ತ, ಅಹಂಕಾರವು ಯಾವುವೂ ನೀನಲ್ಲ. ರಾಗದ್ವೇಷಗಳು ಲೋಭ ಮೋಹಗಳು, ಮದ ಮಾತ್ಸರ್ಯಗಳು ಯಾವುವು ನಿನಗೆ ಸಂಬಂಧವಿಲ್ಲ. ಆದರೆ ಪ್ರದರ್ಶಿಸುತ್ತಿರುವೆ ಅಂದರೆ ನಿನಗೆ ಇನ್ನೂ ತಿಳಿದಿಲ್ಲ. ಆದರೆ ಆ ಸ್ಥಾಯಿಗೆ ಬರಬೇಕು, ಆಗ ನೀನು ಬೆಳೆದಂತೆ.

ಆದ್ದರಿಂದ ಶಂಕರಾಚಾರ್ಯರು ಹೇಳಿರುವಂತಹ ಈ ವಿಷಯಗಳನ್ನು ನೀವು ಅರ್ಥ ಮಾಡಿಕೊಂಡರೆ ನೀವು ಯಾವ ಸ್ಥಾಯಿಯಲ್ಲಿದ್ದಿರೋ ನಿಮಗೆ ಅರ್ಥವಾಗುತ್ತದೆ.

*****

**"ಮನಸ್ಸು ಸಂಕಲ್ಪಗಳನ್ನು, ವಿಕಲ್ಪಗಳನ್ನು ಮಾಡುತ್ತದೆ"**

**ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್**

# 'ಶಂಕರಾಚಾರ್ಯರು ಹೇಳಿದ ನಾಲ್ಕನೆಯ ಶ್ಲೋಕ'

**ಶ್ಲೋಕ ॥ ನ ಪುಣ್ಯ ನ ಪಾಪಂ ನ ಸೌಖ್ಯಂ ನ ದುಃಖಂ**
**ನ ಮಂತ್ರೋ ನ ತೀರ್ಥಂ ನ ವೇದೋ ನ ಯಜ್ಞಃ**
**ಅಹಂ ಭೋಜನಂ ನೈವ ಭೋಜ್ಯಂ ನ ಭೋಕ್ತಾ**
**ಚಿದಾನಂದ ರೂಪಃ ಶಿವೋಹಂ, ಶಿವೋಹಂ॥**

**ತಾತ್ಪರ್ಯ :** ಪುಣ್ಯವಾಗಲಿ, ಪಾಪವಾಗಲಿ ನಾನು ಅಲ್ಲ. ಸುಖವಾಗಲಿ ಅಲ್ಲ, ದುಃಖವಾಗಲಿ, ನಾನು ಅಲ್ಲ. ಮಂತ್ರವಾಗಲಿ, ಪುಣ್ಯಕ್ಷೇತ್ರವಾಗಲಿ ನಾನು ಅಲ್ಲ. ವೇದಗಳಾಗಲಿ ವೇದ ವಿಹಿತವಾಗಿರುವ ಯಜ್ಞಗಳಾಗಲಿ ನಾನು ಅಲ್ಲ. ಭುಜಿಸುವ ಪದಾರ್ಥವಾಗಲಿ, ಭುಜಿಸುವ (ತಿನ್ನುವ) ಕ್ರಿಯೆಯಾಗಲಿ, ಭುಜಿಸುವವನಾಗಲಿ ನಾನು ಅಲ್ಲ. ಚಿದಾನಂದ ಸ್ವರೂಪನಾದ ಶಿವನು ನಾನು, ಶಿವನು ನಾನು.

ಇಲ್ಲಿ ನೋಡಿ, ಬಹಳಷ್ಟು ಜನರು ಪಾಪಗಳನ್ನು ಮಾಡುತ್ತಾರೆ. ಕೆಲವರು ಪುಣ್ಯಗಳನ್ನು ಮಾಡುತ್ತಾರೆ. ಆದರೆ ಇದು ಆ ಬ್ರಹ್ಮಕ್ಕೆ ಸಂಬಂಧ ಇಲ್ಲ. ಅಂದರೆ ಆತ್ಮಕ್ಕೆ ಸಂಬಂಧವಿಲ್ಲ. ನಮಗೆ ಪಾಪವನ್ನು ಮಾಡಿದರೆ ದುಃಖ ಬರುತ್ತದೆ, ಪುಣ್ಯ ಮಾಡಿದರೆ ಭೋಗವು ಬರುತ್ತದೆ. ಅಂದರೆ ಮಾನವನು ಅನುಭವಿಸುವ ದುಃಖವಾಗಲಿ, ಭೋಗವಾಗಲಿ ಆತ್ಮಕ್ಕೆ ಸಂಬಂಧವಿಲ್ಲ. ನೀನು ಎಷ್ಟು ದುಃಖವನ್ನು ಅನುಭವಿಸು, ಅವು ಆತನಲ್ಲ.

ಅದಕ್ಕೆ ಗೀತೆಯಲ್ಲಾಗಲಿ, ಪತ್ರೀಜಿಯವರಾಗಲಿ ಏನೆಂದು ಹೇಳುತ್ತಾರೆಂದರೆ? ಪಾಪಕರ್ಮಗಳಾಗಲಿ, ಪುಣ್ಯ ಕರ್ಮಗಳಾಗಲಿ ನಿನಗೆ ಅಗತ್ಯವಿಲ್ಲ ಎನ್ನುತ್ತಾರೆ. ಅವುಗಳನ್ನು ಬಿಟ್ಟು ಆತ್ಮ ಕರ್ಮಗಳನ್ನು ಮಾಡಿರೆನ್ನುತ್ತಾರೆ. ಅವೇ ಮೋಕ್ಷವನ್ನು ಕೊಡುತ್ತವೆ. ಅಂದರೆ ಆ ಬ್ರಹ್ಮ ಸ್ಥಿತಿಗೆ ಕರೆದೊಯ್ಯುತ್ತವೆ. ಮೋಕ್ಷವೆಂದರೆ ದೇಹ ಸ್ಥಿತಿಯಿಂದ ಮನೋಸ್ಥಿತಿಯಿಂದ, ಬುದ್ಧಿಸ್ಥಿತಿಯಿಂದ ದಾಟಿ, ಆತ್ಮ ಸ್ಥಿತಿ ಅಂದರೆ ಬ್ರಹ್ಮ ಸ್ಥಿತಿಗೆ ಸೇರ ಬಲ್ಲವರಾಗುತ್ತೀರಿ, ಅದೇ ಮೋಕ್ಷ. ಆಗಲೇ ಬ್ರಹ್ಮನಾಗಿ ವಿರಾಜಿಸುತ್ತೀರಿ, ನಾನೇ ಬ್ರಹ್ಮನು ಎಂಬ ಸ್ಥಿತಿಯಲ್ಲಿ ಇರುತ್ತೀರಿ.

ಇದೇನೂ ಆತ್ಮಕ್ಕೆ ಸಂಬಂಧವಿಲ್ಲ, ಈ ದೇಹದಿಂದ ಮಾಡುವ ಪುಣ್ಯವಾಗಲಿ, ಪಾಪವಾಗಲಿ ಅಷ್ಟೇ ಅಲ್ಲದೇ ಸುಖವಾಗಲಿ, ದುಃಖವಾಗಲಿ ನಾನಲ್ಲ ಎಂದಿದ್ದಾರೆ. ಭೋಗಗಳನ್ನು ಹೊಂದಿಸಿಕೊಂಡು ಸುಖಪಡುತ್ತೀರಿ, ಎ.ಸಿಗಳಲ್ಲಿರುತ್ತೀರಿ, ಕಾರುಗಳಲ್ಲಿ ತಿರುಗುತ್ತೀರಿ ಪ್ರತಿ ಹೊತ್ತಿಗೂ ಷಡ್ರಸಗಳಿಂದ ಕೂಡಿದ ಭೋಜನವನ್ನು ಮಾಡುತ್ತೀರಿ, ಎಷ್ಟೋ ಸುಂದರ ದೃಶ್ಯಗಳನ್ನು ನೋಡುತ್ತಾ ಇರುತ್ತೀರಿ. ಮಧುರವಾದ ಸಂಗೀತವನ್ನು ಕೇಳುತ್ತಾ ಇರುತ್ತೀರಿ, ನಾನು ಸುಖಪಡುತ್ತಿದ್ದೇನೆ ಎಂದು ಅಂದುಕೊಳ್ಳುತ್ತಾ ಇರುತ್ತೀರಿ.

ಆದರೆ ಯಾವಾಗಾದರೆ ನಾನು ಬ್ರಹ್ಮನು, ನಾನು ಆತ್ಮನು ಎಂಬ ಸ್ಥಿತಿಗೆ ಬರುತ್ತೀರೋ, ಇವೇನು ನನಗೆ ಸಂಬಂಧವಿಲ್ಲವೆಂಬ ವಿಷಯವು ಅರ್ಥವಾಗುತ್ತದೆ. ಅವುಗಳಿಗಾಗಿ ಹಂಬಲಿಸುವುದಿಲ್ಲ, ಅವುಗಳನ್ನು ಹೊಂದಬೇಕೆಂಬ ಪ್ರಯತ್ನ ಮಾಡುವುದಿಲ್ಲ, ಅವು ಇಲ್ಲವೆಂದು ಚಿಂತಿಸುವುದಿಲ್ಲ, ಇದ್ದರೆ ಅನುಭವಿಸುತ್ತೀರಿ, ಇಲ್ಲದಿದ್ದರೆ ಇಲ್ಲವೆಂದು ಅಂದುಕೊಳ್ಳುವುದಿಲ್ಲ. ಇದನ್ನು ನಾವು ಪತ್ರೀಜಿಯವರಿಂದ ತಿಳಿಯಬಹುದು.

ಪತ್ರೀಜಿಯವರು ಏನೆನ್ನುತ್ತಿದ್ದರೆಂದರೆ ಇದ್ದರೆ ಅನುಭವಿಸು, ಇಲ್ಲದಿದ್ದರೆ ಇಲ್ಲವೆಂದು ಅಂದುಕೊಳ್ಳಬೇಡ ಎನ್ನುತ್ತಾರೆ. ಅವರು ಈ 'ಆನಾಪಾನಸತಿ' ಅಂದರೆ 'ಶ್ವಾಸದ ಮೇಲೆ ಗಮನ ಧ್ಯಾನ'ವನ್ನು ಎಲ್ಲರಿಗೂ ಬೋಧಿಸುವಾಗ ಎಷ್ಟೋ ಊರುಗಳನ್ನು ತಿರುಗುತ್ತಿದ್ದರು. ತಮಗಿದ್ದ ಉದ್ಯೋಗವನ್ನೂ ಕೂಡಾ ರಾಜಿನಾಮೆ ಮಾಡಿದರು. ಅವರಿಗೆ ಇದ್ದ ಆಧಾರವು ಅದೇ. ಅವರ ಕೈಯಲ್ಲಿ ಹಣವಿರುತ್ತಿರಲಿಲ್ಲ, ಹಾಗೆಯೇ ಜನರಲ್ ಕಾಂಪಾರ್ಟ್‌ಮೆಂಟ್‌ನಲ್ಲಿ ಹೋಗಿ, ಬಸ್ಸುಗಳಲ್ಲಿ ನಿಂತುಕೊಂಡು ಹೋಗಿ, ಎಷ್ಟೋ ಊರುಗಳನ್ನು ತಿರುಗುತ್ತಿದ್ದರು.

ಅವರು ಹೇಳುತ್ತಿದ್ದರು, ಒಂದೊಂದು ಕಡೆ ನನಗೆ ಟೀ ಕುಡಿಯಬೇಕು ಅನ್ನಿಸುತ್ತಿತ್ತು, ಆದರೆ ಹಣವಿರದ ಕಾರಣ ಕುಡಿಯುತ್ತಿರಲಿಲ್ಲ ಎನ್ನುತ್ತಿದ್ದರು. ಹಾಗೆಯೇ ಅವರು ಹೇಳುವ ಈ 'ಶ್ವಾಸದ ಮೇಲೆ ಗಮನ' ಧ್ಯಾನವನ್ನು ಯಾರಾದರೆ ಆಸಕ್ತಿಯನ್ನು ತೋರಿಸುತ್ತಿದ್ದರೋ ಅವರಿಗೆ ಬೋಧಿಸುವುದಕ್ಕೆ ಪ್ರಯತ್ನಿಸುತ್ತಿದ್ದರು. ಆಸಕ್ತಿ ಇಲ್ಲದವರನ್ನು ಅವರು ಹಿಡಿಸಿಕೊಳ್ಳುತ್ತಿರಲಿಲ್ಲ, ಬಿಟ್ಟು ಬಿಡುತ್ತಿದ್ದರು.

ಆ ಆಸಕ್ತಿ ಇರುವವರ ಬಳಿ ಕೆಲವು ಕಡೆ ಹಣವೂ ಕೂಡಾ ಇರುತ್ತಿರಲಿಲ್ಲ. ಮನೆಯಲ್ಲಿರುವವರಿಗೇ ಯಾವ ಸೌಕರ್ಯಗಳು ಇರುತ್ತಿರಲಿಲ್ಲ. ಹಾಗಾಗಿ ಅವರಿಗೆಲ್ಲಾ ಸೌಕರ್ಯಗಳನ್ನು ಕೊಡಬಲ್ಲರು! ಆದ್ದರಿಂದ ಅವು ಹೇಗಿದ್ದರೆ ಹಾಗೇ ಇರುತ್ತಿದ್ದರು. ದೊಡ್ಡ ಹಾಸಿಗೆಗಳು ಇಲ್ಲದಿದ್ದರೆ ಒಂದು ರಗ್ಗನ್ನು ಹಾಕಿಕೊಂಡು ನೆಲದ ಮೇಲೆಯೇ ಮಲಗುತ್ತಿದ್ದರು. ಅವರು, ಅವರೇನು ಕೊಟ್ಟರೆ ಅದನ್ನೇ ತಿನ್ನುತ್ತಿದ್ದರು.

ಹಾಗೆಯೇ ನಂತರ ನಂತರ ಈ ಧ್ಯಾನದ ಮಹತ್ವವನ್ನು ಅರ್ಥ ಮಾಡಿಕೊಂಡು ಎಷ್ಟೋ ಜನ ಈ ಮಾರ್ಗದೊಳಗೆ ಬಂದರು. ನಿಧಾನವಾಗಿ ಈ ಧ್ಯಾನಿಗಳು ಹೆಚ್ಚಿದಂತೆಲ್ಲ ಅವರಿಗೆ ಸ್ವಲ್ಪ ಸ್ವಲ್ಪವಾಗಿ ಸೌಕರ್ಯಗಳು ಹೆಚ್ಚಾಗಲು ಪ್ರಾರಂಭವಾದವು. ನಾನು 2002 ನವೆಂಬರ್‌ನಲ್ಲಿ ಈ ಧ್ಯಾನಕ್ಕೆ ಬಂದೆನು. ಆಗ ಅವರಿಗೆ ಕಾರು ಇರಲಿಲ್ಲ, ಡ್ರೈವರ್ ಇರಲಿಲ್ಲ, ಕಾರಲ್ಲಿ ತಿರುಗಿಸುವವರೂ ಇರಲಿಲ್ಲ. ಆದರೂ ಸರಿ ಬಸ್ಸುಗಳಲ್ಲಿಯೇ ತಿರುಗಾಡುತ್ತಿದ್ದರು. ಆಗ ಆ ಪರಿಸ್ಥಿತಿಗೆ ಅವರು ಏನೂ ಅಂದುಕೊಳ್ಳುತ್ತಿರಲಿಲ್ಲ.

ನೀನಾಗಲಿ ಆತ್ಮ ಸ್ಥಿತಿಯೊಳಗೆ ಬೆರೆತುಕೊಳ್ಳುತ್ತಾ ಇದ್ದರೆ, ಆ ಅನುಭೂತಿ ಹೊಂದುತ್ತಾ ಇದ್ದರೆ, ಇವುಗಳನ್ನು ಹಿಡಿಸಿಕೊಳ್ಳುವುದಿಲ್ಲ. ಶಂಕರರು ಹೇಳಿದಂತೆ ಬ್ರಹ್ಮ ಸ್ಥಿತಿ ಅಂದರೆ ನೀನೇ ಬ್ರಹ್ಮವಾಗಿ ಬದಲಾಗುತ್ತಾ ಇರುವ ಸ್ಥಿತಿ. ಪುಣ್ಯವಾಗಲಿ,

ಪಾಪವಾಗಲಿ ನಿನಗೆ ಸಂಬಂಧವಿಲ್ಲ. ಸುಖವಾಗಲಿ, ದುಃಖವಾಗಲಿ ನಾನಲ್ಲ ಎಂದು ಅವುಗಳ ಮೇಲೆ ದೃಷ್ಟಿ ಇಡುವುದಿಲ್ಲ. ಇದ್ದರೆ ಇರುತ್ತವೆ, ಇಲ್ಲದಿದ್ದರೆ ಇಲ್ಲ.

ಶಂಕರಾಚಾರ್ಯರು ಇನ್ನು ಏನು ಹೇಳಿದ್ದಾರೆಂದರೆ ಮಂತ್ರವಾಗಲಿ, ಪುಣ್ಯ ಕ್ಷೇತ್ರವಾಗಲಿ ನಾನಲ್ಲ. ಆದರೆ ಕೆಲವರು ಮಂತ್ರ ಜಪವನ್ನು ಮಾಡುತ್ತಾರೆ, ಇನ್ನು ಕೆಲವರು ಗುರುಗಳ ಬಳಿ ಮಂತ್ರೋಪದೇಶವನ್ನು ತೆಗೆದುಕೊಳ್ಳುತ್ತಾರೆ. ಆದರೆ ಅದು ಬ್ರಹ್ಮಕ್ಕೆ ಏನು ಸಂಬಂಧವಿಲ್ಲ. ಅದಕ್ಕೆ ಮಂತ್ರ ಜಪ ಬೇಡ ಎನ್ನುತ್ತಾರೆ ಪತ್ರೀಜಿಯವರು, ನೀನು ಮಾಡಬೇಕಾದದ್ದು 'ಆನಾಪಾನಸತಿ' ಅಂದರೆ 'ಶ್ವಾಸದ ಮೇಲೆ ಗಮನ' ಮಾತ್ರವೇ. ಈ ಮಂತ್ರ ನಿನಗೆ ಸಂಬಂಧವಿಲ್ಲವೆಂದು ಶಂಕರಾಚಾರ್ಯರು ಹೇಳಿದ್ದಾರೆ.

ಹಾಗೆಯೇ ಬಹಳ ಜನ ಆ ಭಗವಂತನನ್ನು ದರ್ಶಿಸಬೇಕೆಂದರೆ ಪುಣ್ಯ ಕ್ಷೇತ್ರಗಳಿಗೆ ಹೋಗುತ್ತಾರೆ. ಪುಣ್ಯ ಕ್ಷೇತ್ರ ನಾನು ಅಲ್ಲ ಎಂದು ಶಂಕರಾಚಾರ್ಯರು ಹೇಳಿದ್ದಾರೆ. ಅಲ್ಲಿ ಸ್ನಾನಗಳನ್ನು ಮಾಡುತ್ತಾರೆ, ಗುಡಿಗಳಲ್ಲಿ ದರ್ಶನವನ್ನು ಮಾಡಿಕೊಳ್ಳುತ್ತಾರಾಗಲಿ ಅವು ನಾನಲ್ಲ ಎಂದಿದ್ದಾರೆ.

ಹಾಗೆಯೇ ವೇದಗಳಾಗಲಿ, ವೇದಗಳು ಆಗದೇ ಇರುವಂತ ಯಜ್ಞಗಳಾಗಲಿ ನಾನಲ್ಲ ಎಂದಿದ್ದಾರೆ. ಬಹಳಷ್ಟು ಮಂದಿ ಈ ವೇದಗಳು ಬಹಳ ಶ್ರೇಷ್ಠವಾದ ಪುಣ್ಯ ಕರ್ಮಗಳೆಂದುಕೊಳ್ಳುತ್ತಾರೆ. ಆದರೆ ಪುಣ್ಯ ಕರ್ಮಗಳೇನಾದರೂ ಆದರೆ ಆಗಿರಬಹುದು, ಆದರೆ ಅವು ಕಾಮ್ಯ ಕರ್ಮಗಳು. ಕೋರಿಕೆಗಳಿಂದ ಮಾಡುತ್ತಾರೆ, ಹಾಗಾಗಿ ಈ ಪರಬ್ರಹ್ಮನಿಗೆ ಕೋರಿಕೆಗಳೇನು ಇರುತ್ತವೆ? ಆತನಿಗೆ ಇಲ್ಲದ್ದು ಎಂಬುದು ಯಾವುದು? ಸಮಸ್ತವೂ ಆತನೇ ಅಲ್ಲವೇ? ಎಲ್ಲವನ್ನು ಸೃಷ್ಟಿಸಿರುವುದೂ ಕೂಡಾ ಆತನೇ ಅಲ್ಲವೇ? ಆದ್ದರಿಂದ ಕೋರಿಕೆಗಳೊಂದಿಗೆ ಮಾಡುವಂತಹ ಯಾವುವು ನನಗೆ ಸಂಬಂಧವಿಲ್ಲ, ನಾನಲ್ಲ ಎಂದಿದ್ದಾರೆ.

ಹಾಗೆಯೇ ಭುಜಿಸುವ (ಸೇವಿಸುವ) ಪದಾರ್ಥವಾಗಲಿ ಅಂದರೆ ಬಹಳಜನ ಷಡ್ರಸಗಳಿಂದ ಕೂಡಿದ ಆಹಾರವನ್ನು ಭುಜಿಸುತ್ತಾ ಇರುತ್ತಾರೆ, ಅದು ಯಾವ ಪದಾರ್ಥವಾದರೂ ಅದು ನಾನಲ್ಲ ಎಂದಿದ್ದಾರೆ.

ಅದಕ್ಕೆ ರಮಣ ಮಹರ್ಷಿಯವರು ಶರೀರವನ್ನು ಉಳಿಸಿಕೊಳ್ಳಲು ಯಾವುದು ಇದ್ದರೆ ಅದನ್ನು ತೆಗೆದುಕೊಳ್ಳುತ್ತಿದ್ದರು. ಅದು ಬೇಕು, ಇದು ಬೇಕು ಎಂಬುದು ಆತನಿಗೆ ಇರುತ್ತಿರಲಿಲ್ಲ. ಸೇವಿಸುವಂತ ಕ್ರಿಯೆಯಾಗಲಿ, ಅದನ್ನು ಭುಜಿಸುವವನಾಗಲಿ ನಾನಲ್ಲ ಎಂದಿದ್ದಾರೆ. ಚಿದಾನಂದ ಸ್ವರೂಪನಾದ ಶಿವನೇ ನಾನು, ಶಿವನೇ ನಾನು ಎಂದಿದ್ದಾರೆ.

ನಾವು ಗಮನಿಸಿದರೆ ಲೋಕದಲ್ಲಿ ಭಗವಂತನಿಗೆ ನೈವೇದ್ಯಗಳನ್ನು ಇಡುತ್ತಾರೆ. ಆದರೆ ಅವುಗಳನ್ನು ಭುಜಿಸುವವನು ನಾನಲ್ಲ ಎಂದು ಶಂಕರಾಚಾರ್ಯ ಹೇಳಿದ್ದಾರೆ.

ನಾನು ಬ್ರಹ್ಮನು, ಆತ್ಮನು, ಯಾವುದರೊಂದಿಗೂ ನನಗೆ ಸಂಬಂಧವಿಲ್ಲ. ಬಹಳ ಜನ ಒಂದು ಪ್ರಶ್ನೆಯನ್ನು ಹಾಕುತ್ತಾರೆ, ಮತ್ತೆ ಶರೀರದಲ್ಲಿಯೇ ಆತ್ಮವಿದೆಯಲ್ಲಾ! ಭಗವಂತನು ಇದ್ದಾನೆ ಎನ್ನುತ್ತಾರೆ. ಅವು ಯಾವುವು ಆತ್ಮಕ್ಕೆ ಸಂಬಂಧವಿಲ್ಲ. ಇವೆಲ್ಲಾ ನಾನೆಂದುಕೊಂಡು ನೀನು ಮಾಡುತ್ತಿರುವವೇ. ನೀನು ಮನಸ್ಸನ್ನೇ ನಾನು ಎಂದು ಕೊಳ್ಳುತ್ತಿರುವೆ, ಏಕೆಂದರೆ ಆ ಮನಸ್ಸೇ ದೇಹವನ್ನು ಇಂದ್ರಿಯಯಗಳನ್ನೆಲ್ಲಾ ನಡೆಸುತ್ತದೆ. ಆದ್ದರಿಂದ ಅವೆಲ್ಲವನ್ನು ಅನುಭವಿಸುವುದು ಮನಸ್ಸೇ, ಮಾಡಿಸುವುದೂ ಮನಸ್ಸೇ, ದುಃಖಪಡುವುದೂ ಮನಸ್ಸೇ, ಸಂತೋಷಪಡುವುದೂ ಮನಸ್ಸೇ, ಏನು ಮಾಡಿದರೂ ಮನಸ್ಸೇ.

ಆದ್ದರಿಂದ ಇವು ಯಾವುವು ಆತ್ಮಕ್ಕೆ ಸಂಬಂಧವಿಲ್ಲ. ನೀನು ಪಾಪವನ್ನು ಮಾಡುತ್ತಿರುವೆ. ಆ ಪಾಪದ ಫಲವನ್ನು ನೀನೇ ಅನುಭವಿಸುತ್ತಿರುವೆ, ಅದು ಆತ್ಮಕ್ಕೆ ಸಂಬಂಧವಿಲ್ಲ. ನೀನು ನರಕವನ್ನು ಅನುಭವಿಸುತ್ತಾ ಇರುವೆ. ಆ ನರಕವು ಆತ್ಮಕ್ಕೆ ಸಂಬಂಧವಿಲ್ಲ, ನೀನು ನಾನು ನಾನು ಎಂದುಕೊಳ್ಳುತ್ತಾ ಮಾಡುತ್ತಾ ಇರುತ್ತೀಯ. ನೀನು 'ನಿಜವಾದ ನಾನು'ವನ್ನು ಬಿಟ್ಟು, 'ಕೊಸರು ನಾನುವನ್ನು' ನಾನು ಎಂದುಕೊಳ್ಳುತ್ತಿರುವೆ. ಆ ಕೊಸರು ನಾನುವಿಗೇ ಇವೆಲ್ಲಾ ಸಂಬಂಧ, ನಿಜವಾದ ನಾನು ಅಂದರೆ ಆತ್ಮಕ್ಕೆ ಇವೇನೂ ಸಂಬಂಧವಿಲ್ಲ.

ಆದ್ದರಿಂದ ನಿನ್ನ ಜೀವನದಲ್ಲಿ ನಡೆಯುತ್ತಿರುವವೆಲ್ಲವನ್ನು ಆತ್ಮ ಅಂದರೆ ಆ ಬ್ರಹ್ಮವು ಸಾಕ್ಷಿಭೂತವಾಗಿ ಗಮನಿಸುತ್ತಾ ಇರುತ್ತದೆ. ಆದರೆ ಅವುಗಳಿಗೆ ಸ್ಪಂದಿಸುವುದಾಗಲಿ, ಹಿಡಿಸಿಕೊಳ್ಳುವುದಾಗಲಿ, ಪ್ರತಿಕ್ರಿಯೆಗಳಾಗಲಿ ಏನೂ ಇರುವುದಿಲ್ಲ. ನೋಡುತ್ತಾ ಇರುತ್ತದೆ ಅಷ್ಟೇ. ಇದನ್ನು ನೀವು ಅರ್ಥ ಮಾಡಿಕೊಳ್ಳಬೇಕು.

ಆ ಸ್ಥಿತಿಗೆ ನೀವು ಸೇರಿಕೊಂಡರೆ ಇವೆಲ್ಲಾ ನನಗೆ ಸಂಬಂಧವಿಲ್ಲವೆಂದು ಅರ್ಥವಾಗುತ್ತದೆ. ಆಗ ಯಾವ ಆಸೆಯೂ ಇರದು. ದ್ವೇಷವಿರುವುದಿಲ್ಲ, ಕ್ರೋಧವಿರುವುದಿಲ್ಲ, ಅಸೂಯೆ ಇರುವುದಿಲ್ಲ, ಮಮಕಾರಗಳೂ ಇರುವುದಿಲ್ಲ. ಇಂತಹವು ಎಷ್ಟು ಮಾತ್ರ ಇದ್ದರೂ ಕೂಡಾ ನೀವು ಇನ್ನೂ ಆತ್ಮ ಸ್ಥಿತಿಗೆ ಅಂದರೆ ಬ್ರಹ್ಮ ಸ್ಥಿತಿಗೆ ಸೇರಿಕೊಂಡಿಲ್ಲವೆಂದೇ ಲೆಕ್ಕ.

ನೀವು ನಿರ್ವಾಣ ಷಟ್ಕವನ್ನು ಅರ್ಥ ಮಾಡಿಕೊಂಡು ಆ ಸ್ಥಿತಿಯಲ್ಲಿ ಜೀವಿಸಿದರೆ ನೀವು ಆತ್ಮ ಸ್ಥಿತಿಯಲ್ಲಿ ಜೀವಿಸುತ್ತಿರುವಂತೆ ಲೆಕ್ಕ. ಬೆಳಿಗ್ಗೆಯಿಂದ ಸಂಜೆಯವರೆಗೆ ಎಷ್ಟನ್ನೋ ಮಾಡುತ್ತೀರಿ, ಒಂದೂ ಕೂಡಾ ನಾನಲ್ಲವೆಂದು ಹೇಳುತ್ತಿದ್ದಾರೆ ಅವರು. ನಾನು ಎಂದುಕೊಂಡು ಮಾಡುತ್ತಾ ಇದ್ದರೆ ಒಂದು ರೀತಿಯಲ್ಲಿ ಇರುತ್ತದೆ. ನಾನಲ್ಲ ಎಂದುಕೊಂಡು ಮಾಡುತ್ತಾ ಇದ್ದರೆ ಮತ್ತೊಂದು ರೀತಿಯಲ್ಲಿರುತ್ತದೆ, ಆದಕಾರಣ ನಮ್ಮ ಸಾಧನೆ ಆ ಸ್ಥಿತಿಗೆ ಬರಬೇಕು, ಆಗಲೇ ನೀವು ಪರಿಪೂರ್ಣರಾಗುವುದು.

*****

**ಅಂತರಾತ್ಮ ಪ್ರಬೋಧನೆಯನ್ನು ಅನುಸರಿಸುವವರೇ ಧರ್ಮ ಮಾರ್ಗದಲ್ಲಿ ಜೀವಿಸ ಬಲ್ಲರು. –ಪತ್ರೀಜಿ**

# 'ಶಂಕರಾಚಾರ್ಯರು ಹೇಳಿದ ಐದನೆಯ ಶ್ಲೋಕ'

ಬ್ರಹ್ಮವೊಂದರ ಲಕ್ಷಣಗಳನ್ನು ಎಷ್ಟೋ ರೀತಿಯಲ್ಲಿ, ಎಷ್ಟೋ ಕೋನಗಳಲ್ಲಿ ನಿರ್ವಾಣ ಷಟ್ಕದಲ್ಲಿ ಶಂಕರಾಚಾರ್ಯರು ವಿವರಿಸಿದ್ದಾರೆ. ಮತ್ತೇ ಅದರಲ್ಲಿ 5ನೇ ಶ್ಲೋಕವನ್ನು ಕುರಿತು ತಿಳಿದುಕೊಳ್ಳೋಣ.

**ಶ್ಲೋಕ ॥ ನ ಮೃತ್ಯು ರ್ನ ಶಂಕಾ ನ ಮೇ ಜಾತಿ ಬೇಧಃ**

**ಪಿತೋ ನೈವ ಮೇ ನೈವ ಮಾತಾ ಚ ಜನ್ಮ ॥**

**ನ ಬಂಧು ರ್ನ ಮಿತ್ರಂ ಗುರು ರ್ನೈವ ಶಿಷ್ಯಃ**

**ಚಿದಾನಂದ ರೂಪಃ ಶಿವೋಹಂ, ಶಿವೋಹಂ॥**

**ತಾತ್ಪರ್ಯ:** ನನಗೆ (ಆತ್ಮಕ್ಕೆ) ಮರಣವಿಲ್ಲ, ಭಯವಿಲ್ಲ, ಸ್ತ್ರೀ, ಪುರುಷ ನಪುಂಸಕಗಳೆಂಬ ಜಾತಿ ಬೇಧಗಳಿಲ್ಲ. ನನಗೆ ಹುಟ್ಟೂ ಇಲ್ಲ, ಆದ ಕಾರಣ ನನಗೆ ತಂದೆಯಾಗಲಿ, ತಾಯಿಯಾಗಲಿ ಇಲ್ಲ. ನನಗೆ ಬಂಧುಗಳಾಗಲಿ, ಮಿತ್ರರಾಗಲಿ,

ಗುರುವಾಗಲಿ, ಶಿಷ್ಯರಾಗಲಿ ಇಲ್ಲ. ಚಿದಾನಂದ ಸ್ವರೂಪನಾದ ಶಿವನು ನಾನು, ಶಿವನು ನಾನು ಎಂದು ಈ ಶ್ಲೋಕದಲ್ಲಿ ಬ್ರಹ್ಮನ ಕುರಿತು ವಿವರಿಸಿದ್ದಾರೆ.

ನಾವೆಲ್ಲಾ ಕೂಡಾ ಆ ಬ್ರಹ್ಮ ಸ್ಥಿತಿಯನ್ನು ಹೊಂದುವುದಕ್ಕೆ ಕೃಷಿ ಮಾಡುತ್ತಿದ್ದೇವೆ, ಕಷ್ಟ ಪಡುತ್ತಿದ್ದೇವೆ, ತೀವ್ರ ಸಾಧನೆಯನ್ನು ಮಾಡುತ್ತಿದ್ದೇವೆ. ಒಂದು ರೀತಿಯಲ್ಲಿ ಅಗತ್ಯಗಳಿಗೆ ಹೊರತು, ಉಳಿದ ಸಮಯವನ್ನೆಲ್ಲಾ ಇದಕ್ಕೆ ಒದಗಿಸುತ್ತಿದ್ದೇವೆ. ಮತ್ತೇ ಇಷ್ಟು ಕಷ್ಟ ಪಡುತ್ತಾ, ಇಷ್ಟ ಸಾಧನೆಯನ್ನು ಮಾಡುತ್ತಾ, ಇಷ್ಟು ಜ್ಞಾನವನ್ನು ಹೊಂದುತ್ತಾ, ಯಾವ ಸ್ಥಾಯಿಯಲ್ಲಿ ಇದ್ದೇವೆ? ಎಷ್ಟು ಬೆಳೆದಿದ್ದೇವೆ? ಆತ್ಮ ಸ್ಥಿತಿಗೆ ಸೇರಿಕೊಳ್ಳುವರಾಗಿದ್ದೇವೆಯೇ? ಇಲ್ಲವೇ? ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಈ ನಿರ್ವಾಣ ಷಟ್ಕಂ. ಇಲ್ಲದಿದ್ದರೆ ಏನೋ ಸಾಧನೆ ಮಾಡಿ ಇಷ್ಟು ವರ್ಷಗಳ ಕಾಲದಿಂದ ಮಾಡುತ್ತಿದ್ದೇನೆ, ಬೆಳೆದುಬಿಟ್ಟೆನು ಎನ್ನುವಂತ ಭಾವವಿರುತ್ತದೆ.

ಈ ಶ್ಲೋಕದಲ್ಲಿ ಶಂಕರಾಚಾರ್ಯರು ಏನು ಹೇಳಿದ್ದಾರೆಂದರೆ? ನನಗೆ ಮರಣವಿಲ್ಲ, ಭಯವಿಲ್ಲ ಎಂದಿದ್ದಾರೆ. ಆತ್ಮ ಸ್ಥಿತಿಗೆ ನೀವು ಸೇರಿಕೊಂಡರೆ ಮೊಟ್ಟ ಮೊದಲು ಅರ್ಥವಾಗಬೇಕಾದದ್ದು ಇದೇ. ನನಗೆ ಮರಣ ಇಲ್ಲ ಎಂಬುದು ಯಾವಾಗಾದರೆ ನಿಮಗೆ ಚೆನ್ನಾಗಿ ಅರ್ಥವಾಗುತ್ತದೋ, ಸಾವಿಗೆ ಕೂಡಾ ಭಯಪಡುವುದಿಲ್ಲ. ಸಾವಿಗೆ ಯಾವಾಗಲೂ ಸಿದ್ಧವಾಗಿರುತ್ತೀರಿ. ಸಾವು ಎಂದರೆ ಶರೀರವನ್ನು ಬಿಡುವುದೇ ಎಂಬುದು ಅರ್ಥವಾಗುತ್ತದೆ.

ಪ್ರಕೃತಿಯಲ್ಲಿರುವ ಏರ್ಪಾಡು ಏನೆಂದರೆ ಮುದಿಯಾದ ಈ ಶರೀರವನ್ನು ಉಪಯೋಗಿಸಿಕೊಂಡಷ್ಟು ಕಾಲ ಉಪಯೋಗಿಸಿಕೊಂಡ ಮೇಲೆ, ಉಪಯೋಗವಿಲ್ಲದ ಅದನ್ನು ಬಿಟ್ಟರೆ ಮತ್ತೇ ಹೊಸ ಶರೀರವು ಬರುತ್ತದೆ. ಮತ್ತೇ ಎಲ್ಲಾ ರೀತಿಯ ನೈಪುಣ್ಯತೆಗಳಿಂದ ಹೊಸ ಶರೀರವನ್ನು ಉಪಯೋಗಿಸಿಕೊಳ್ಳುತ್ತೀರಿ. ಜ್ಞಾನವನ್ನು ಇನ್ನೂ ಹೆಚ್ಚಿಸಿಕೊಳ್ಳುತ್ತೀರಿ. ಆದ್ದರಿಂದ ಮರಣವು ಲಾಭವೇ ಹೊರತು ನಷ್ಟವೇನೂ ಅಲ್ಲ. ಮತ್ತೆ ಲಾಭವನ್ನುಂಟು ಮಾಡುವುದಕ್ಕೆ ಭಯಪಡುವುದೇನಿದೆ?

ಒಂದನ್ನು ನೀವು ನೆನಪಿಟ್ಟುಕೊಳ್ಳಿ, ನೀವು ದೇಹವೆಂದುಕೊಂಡರೆ ಮರಣಕ್ಕೆ ಭಯಪಡುತ್ತೀರಿ. ನೀವು ಆತ್ಮವೆನ್ನುವುದು ಪೂರ್ತಿಯಾಗಿ ಅರಿವಾದಾಗ ಈ ಮರಣ ಭಯವೆಂಬುದು ಇರುವುದಿಲ್ಲ. ಅದಕ್ಕೆ ಕೃಷ್ಣನು ಕೂಡಾ ಹೇಳಿದ್ದಾನೆ. ಮರಣಿಸಿದವರ ಕುರಿತಾಗಲಿ, ಮರಣಿಸುವವರ ಕುರಿತಾಗಲಿ ಯಾರಾದರೆ ದುಃಖಿಸುವುದಿಲ್ಲವೋ ಅವರು

ಪಂಡಿತರು ಅಂದರೆ ಜ್ಞಾನದಲ್ಲಿ ಪೂರ್ಣವಾಗಿ (ಹಣ್ಣಾದವರು) ನುರಿತವರು ಎಂದು ಸ್ಪಷ್ಟವಾಗಿ ಹೇಳಿದ್ದಾರವರು.

ಆದ್ದರಿಂದ ಇದನ್ನು ತಿಳಿದುಕೊಳ್ಳಬೇಕು, ಆಗ ಆ ಭಯವೇ ಅಲ್ಲ ಯಾವ ರೀತಿಯಾದ ಭಯವೂ ಇರುವುದಿಲ್ಲ, ಜೀವನದಲ್ಲಿ ಆಸ್ತಿಗಳು ಬಂದರೂ, ಹೋದರೂ, ಅಂದುಕೊಂಡದ್ದು ನಡೆದರೂ, ನಡೆಯದಿದ್ದರೂ, ಮಾಡಿದ ಕೆಲಸದಲ್ಲಿ ವಿಜಯವನ್ನು ಸಾಧಿಸಿದರೂ, ಸಾಧಿಸದಿದ್ದರೂ ಭಯವಿರುವುದಿಲ್ಲ. ಏನು ನಡೆಯಬೇಕೋ ಅದು ನಡೆಯಿತು, ಅದಕ್ಕೆ ಭಯಪಡುವುದೇತಕ್ಕೆ? ನಡೆಯುತ್ತಿರುವುದರೊಂದಿಗೆ ನನಗೆ ಸಂಬಂಧವಿಲ್ಲ. ನಾನು ಚಿದಾನಂದ ರೂಪನಾದ ಶಿವನು ಅಂದರೆ ಬ್ರಹ್ಮನು, ಆತ್ಮನು ಎಂದು ತಿಳಿದುಕೊಳ್ಳಬೇಕು.

ಅದಕ್ಕೆ ಯಾವಾಗಲೂ ನಾನು ದೇಹವಲ್ಲ ಆತ್ಮವೆಂದು ನೆನಪಿಟ್ಟುಕೊಂಡರೆ ನಿಮಗೆ ಅರ್ಧ ದುಃಖ ಅಲ್ಲಿಯೇ ಹೋಗುತ್ತದೆ. ಇಲ್ಲದಿದ್ದರೆ ಪ್ರತಿಯೊಂದಕ್ಕೂ ದುಃಖಪಡುತ್ತೀರಿ. ಅದು ಏಕೆ ನಡೆಯಿತು? ಇದು ಏಕೆ ನಡೆಯಿತು? ಇದಕ್ಕೆ ಕಾರಣವೇನು? ಅದಕ್ಕೆ ಕಾರಣವೇನು? ಎಂದು ಬಹಳ ದುಃಖಪಡುತ್ತಾ ಇರುತ್ತೀರಿ. ಆದ್ದರಿಂದ ಯಾವ ರೀತಿಯಾದ ಭಯವಿಲ್ಲದೆ ನಿರ್ಭಯವಾಗಿ ಜೀವಿಸಿದರೆ ನೀವು ಆ ಸ್ಥಿತಿಗೆ ಸೇರಿಕೊಂಡಂತೆ ಲೆಕ್ಕ.

ಆತ್ಮಕ್ಕೆ ಸ್ತ್ರೀ, ಪುರುಷನು, ನಪುಂಸಕನು ಎಂಬ ಜಾತಿ ಬೇಧಗಳಿಲ್ಲ, ನೀವು ದೇಹ ಪರವಾಗಿ ಆಲೋಚಿಸಿದರೆ ಈ ಬೇಧಗಳೆಲ್ಲಾ ಕಾಣಿಸುತ್ತವೆ, ಆತ್ಮವೆಂದು ತಿಳಿದುಕೊಂಡರೆ, ಆತ್ಮಕ್ಕೆ ಸ್ತ್ರೀ ಏನಿದೆ? ಪುರುಷನೇನಿದೆ? ಇವೆಲ್ಲಾ ಭೂಮಿಗೆ ಬರುವುದಕ್ಕೆ ತೆಗೆದುಕೊಂಡ ಶರೀರಗಳೇ ಹೊರತು ನೀವು ಸ್ತ್ರೀ ಅಲ್ಲ, ಪುರುಷನು ಅಲ್ಲ, ನಪುಂಸಕನು ಅಲ್ಲ, ಭೂಮಿಯ ಮೇಲೆ ನಿಮ್ಮ ಕೆಲಸ ಪೂರ್ತಿ ಮಾಡಿಕೊಂಡು ಮತ್ತೇ ಶರೀರವನ್ನು ಬಿಡುತ್ತೀರಿ.

ಕೆಲವು ಜನ್ಮಗಳು ಸ್ತ್ರೀಯರಾಗಿ, ಕೆಲವು ಜನ್ಮಗಳು ಪುರುಷರಾಗಿ, ಕೆಲವು ಜನ್ಮಗಳು ಹಿಂದೂಗಳಾಗಿ, ಕೆಲವು ಮುಸ್ಲಿಂರಾಗಿ, ಹಾಗೆಯೇ ಅನೇಕ ರೀತಿಯ ಕುಲಗಳಲ್ಲಿ ಜನ್ಮವನ್ನು ತೆಗೆದುಕೊಳ್ಳುತ್ತೀರಿ. ಇವೆಲ್ಲವೂ ಶಾರೀರಕ ಸಂಬಂಧವಾದವುಗಳೇ ಹೊರತು ಆತ್ಮರಾದ ನಿಮಗೆ ಸಂಬಂಧವಿಲ್ಲ.

ಅಷ್ಟೇ ಅಲ್ಲ, ಇನ್ನೊಂದನ್ನು ತಿಳಿದುಕೊಳ್ಳುತ್ತೀರಿ, ಆತ್ಮನಾದ ನನಗೆ ಹುಟ್ಟು ಇಲ್ಲ, ಸಾವೂ ಇಲ್ಲ, ಮತ್ತೆ ನನಗೆ ಹುಟ್ಟೇ ಇಲ್ಲದಿರುವಾಗ ತಾಯಿ ಎಲ್ಲಿರುತ್ತಾಳೆ? ತಂದೆ ಎಲ್ಲಿರುತ್ತಾನೆ? ಬಂಧುಗಳೆಲ್ಲಿರುತ್ತಾರೆ? ಮಿತ್ರರೆಲ್ಲಿರುತ್ತಾರೆ? ಆದ್ದರಿಂದ ದೇಹಸ್ಥಿತಿಯಲ್ಲಿರುವಷ್ಟು ಕಾಲವೇ ಇವೆಲ್ಲಾ ಇರುತ್ತವೆ. ಆದರೆ ಯಾವಾಗಾದರೆ ನಾನು ಆತ್ಮನು ಎಂಬ ಅರಿವಾಗುತ್ತದೋ ಇವೆಲ್ಲಾ ಇರುವುದಿಲ್ಲ.

ನನಗೆ ಮಿತ್ರರಾಗಲಿ, ಬಂಧುಗಳಾಗಿ ಯಾರೂ ಇಲ್ಲ. ನನಗೆ ಗುರುವಾಗಲಿ, ಶಿಷ್ಯನಾಗಲಿ ಯಾರೂ ಇಲ್ಲ ಎಂದಿದ್ದಾರೆ. ಗುರುವು ಯಾರೂ ಇಲ್ಲ ಎನ್ನುವುದಕ್ಕೆ ಒಂದು ಸಣ್ಣ ವಿಷಯವನ್ನು ಹೇಳುತ್ತೇನೆ. ಒಂದು ಊರಲ್ಲಿ ಒಬ್ಬ ಗುರುವಿನ ಬಳಿ ಕೆಲ ಶಿಷ್ಯರು ವಿದ್ಯೆಯನ್ನು ಅಭ್ಯಸಿಸುತ್ತಿದ್ದಾರೆ. ಅವರಲ್ಲಿ ಒಬ್ಬ ಶಿಷ್ಯನು ಏನೆಂದನೆಂದರೆ, ಕೆಲವು ದಿನಗಳಲ್ಲಿ ಕಲಿತ ಮೇಲೆ ಅಂದರೆ ಒಂದೋ, ಎರಡೋ, ಮೂರೋ ವರ್ಷಗಳೋ ಕಲಿತ ನಂತರ ಗುರುವಿನೊಂದಿಗೆ, ನಾನು ವೇದಗಳನ್ನು, ವೇದಾಂಗಗಳನ್ನು ನಿಮ್ಮಿಂದ ಕಲಿತೆನು, ನಿಮಗೆ ಧನ್ಯವಾದಗಳು. ನನಗೆ ಬಿಡುವು ಕೊಟ್ಟರೆ ಇನ್ನು ನಾನು ಹೋಗುತ್ತೇನೆ ಎಂದನು.

ಎಲ್ಲಿ ಮುಗಿಯಿತಯ್ಯಾ? ಇನ್ನೂ ಕಲಿತುಕೊಳ್ಳಬೇಕಾದದ್ದು ಇದೆ ಅಂದರು. ಮತ್ತೇ ಇನ್ನೊಂದು ವರ್ಷ ಆ ಗುರುವಿನ ಬಳಿಯೇ ಇದ್ದು ಇನ್ನೂ ಎಷ್ಟೋ ವಿಷಯಗಳನ್ನು ಕಲಿತುಕೊಂಡನು. ಇನ್ನು ಹೋಗಿ ಬರುತ್ತೇನೆ ಗುರುಗಳೇ ಎಂದನು. ಆಗ ಗುರುಗಳು ಆಗಲೇ ಏನಾಗಿದೆ? ನೀನು ಇನ್ನೂ ಪೂರ್ಣವಾಗಿ ಕಲಿತುಕೊಳ್ಳಬೇಕು, ಇನ್ನು ಕೆಲವು ದಿನಗಳು ಕಲಿತುಕೋ ಎಂದರು. ಮತ್ತೇ ಅದೇ ರೀತಿಯಾಗಿ ಒಂದು ವರ್ಷ ಇದ್ದ ಮೇಲೆ, ಇನ್ನು ಕಲಿತುಕೊಳ್ಳಬೇಕಾದವು ಏನಿರುತ್ತವೆಯೆಂದು ಹೇಳಿ, ಗುರುಗಳಿಗೆ ಹೋಗಿ ಬರುತ್ತೇನೆಂದ. ಆತನು ಮತ್ತೇ ಸರಿ ಹೋಗದು, ನೀನು ಕಲಿತು ಕೊಳ್ಳಬೇಕಾದದ್ದು ಬಹಳ ಇದೆ ಎಂದು ಹೇಳಿದನು.

ಮತ್ತೇ ಒಂದು ವರ್ಷ ಆದ ನಂತರ ಆ ಶಿಷ್ಯನು ಏನು ಮಾಡಿದನೆಂದರೆ! ಆ ಗುರುವಿಗೆ ಹೇಳದೇ ಹೋಗಿ ಬಿಟ್ಟನು. ಆಗ ಗುರುವಿಗೆ ಅರ್ಥವಾಯಿತು. ಈಗ ಇವನು ಪರಿಪೂರ್ಣವಾಗಿ ತಿಳಿದುಕೊಂಡಿದ್ದಾನೆ. ಸಮಸ್ತವೂ ನಾನೇ, ಎಲ್ಲಾ ನಾನೇ, ನನ್ನನ್ನು ಮೀರಿದ್ದು ಇಲ್ಲ. ಇನ್ನು ಕಲಿತು ಕೊಳ್ಳಬೇಕಾದದ್ದು ಕೂಡಾ ಏನೂ ಇಲ್ಲ ಎಂಬ ಸ್ಥಾಯಿಗೆ ಬಂದಿದ್ದಾನೆ ಆದ್ದರಿಂದ ಇನ್ನು ಗುರುವಿಗೆ ಕೂಡಾ ಹೇಳಬೇಕಾದದ್ದು ಏನಿದೆ ಎಂದು ಹೇಳಿ, ಅವನು ಹೇಳದೆಯೇ ಹೋಗಿ ಬಿಟ್ಟನು.

ಅಲ್ಲಿ ನೀವು ಆ ಸ್ಥಿತಿಗೆ ಸೇರಿ ಕೊಂಡಾಗ ನಿಮಗೇನು ಅರ್ಥವಾಗುತ್ತದೆ ಎಂದರೆ, ನಮಗೆ ಗುರುವೂ ಇರುವುದಿಲ್ಲ.

ಏನ್ರೀ! ಬ್ರಹ್ಮಕ್ಕೆ ಮತ್ತೊಬ್ಬ ಗುರುವು ಇರುತ್ತಾನಾ? ಆಲೋಚಿಸಿರಿ. ಬ್ರಹ್ಮಕ್ಕೆ ತಿಳಿಯದಿರುವುದೇನಿದೆ? ಹೋಗಲಿ, ಶಿಷ್ಯರು ಇರುವುದಕ್ಕೆ ಎಲ್ಲರೂ ಆತನೊಳಗಿಂದ ಬಂದ ಅಂಶಗಳೇ ಅಲ್ಲವೇ! ಆತನ ಸಮಾನವೇ ಅಲ್ಲವೇ! ಆತನಂತವರೇ ಅಲ್ಲವೇ! ಮತ್ತೆ ಅವರು ಶಿಷ್ಯರು ಹೇಗಾಗುತ್ತಾರೆ?

ಆದ್ದರಿಂದಲೇ ಶಂಕರಾಚಾರ್ಯರು ಈ ವಿಷಯವನ್ನು ಕೂಡಾ ಹೇಳಿದ್ದಾರೆ. ನನಗೆ ಗುರುಗಳಾಗಲಿ, ಶಿಷ್ಯರಾಗಲಿ ಇಲ್ಲ. ಕಾರಣವೇನೆಂದರೆ, ನಾನು ಚಿದಾನಂದ ಸ್ವರೂಪನಾದ ಶಿವನು ಅಂದರೆ ಬ್ರಹ್ಮನು. ಆ ಸ್ಥಿತಿಗೆ ಬಂದಾಗ ಅವರು ಪೂರ್ಣಾತ್ಮ ಸ್ಥಾಯಿಗೆ ಬೆಳೆದಂತೆ ಲೆಕ್ಕ. ಅವರಿಗಿನ್ನು ಜನ್ಮಗಳಿಲ್ಲ.

ಆದ್ದರಿಂದ ಈ ಲಕ್ಷಣಗಳೆಲ್ಲಾ ಯಾರಲ್ಲಿ ಇರುತ್ತವೆಯೋ ಅವರು ಪರಿಪೂರ್ಣ ಸ್ಥಿತಿಗೆ ಸೇರಿದವರು, ಬೆಳೆದವರು. ನೀವು ಇನ್ನೂ ಮರಣಕ್ಕೆ ಭಯ ಪಡುತ್ತಾ ಇದ್ದರೆ, ಇನ್ನು ಬೆಳೆಯಬೇಕು. ಯಾವುದಕ್ಕೆ ಭಯಪಡುತ್ತಿದ್ದರೂ ನೀವು ಬೆಳೆಯಬೇಕು. ಆಕೆಯು ಸ್ತ್ರೀ, ಇವನು ಪುರುಷನು, ಅವನು ನಪುಂಸಕನು ಎಂದು ಇನ್ನೂ ಇಂತಹ ಭಾವಗಳಿದ್ದರೆ ಇನ್ನು ಬೆಳೆದಿಲ್ಲವೆಂದೇ ಲೆಕ್ಕ.

ಈ ಶರೀರವೆಂಬುದು ಜ್ಞಾನವನ್ನು ಬೆಳೆಸಿಕೊಳ್ಳುವುದಕ್ಕೆ ಕೊಡಲ್ಪಟ್ಟಿದೆ. ಆದಕಾರಣ ಈ ಶರೀರವೇ ನಾನೆಂದುಕೊಳ್ಳುತ್ತಾ, ಅದಕ್ಕಾಗಿಯೇ ಶ್ರಮಿಸುತ್ತಾ, ಕಷ್ಟಪಡುತ್ತಾ ಇದ್ದರೆ, ಎಷ್ಟು ಅಜ್ಞಾನದಲ್ಲಿದ್ದಾರೋ ನಾವು ಆಲೋಚಿಸಬೇಕು. ಈ ಶರೀರವು ನಾನೆಂದು ಭಾವಿಸಿದರೇನೇ ದುಃಖ, ನನಗೆ ಇಂತಹ ಗಂಡ ಬಂದನು, ಇಂತಹ ಮಕ್ಕಳು ಇದ್ದಾರೆ, ಇಲ್ಲದಿದ್ದರೆ ಇಂತಹ ಹೆಂಡತಿ ಇದ್ದಾಳೆ, ನನಗೆ ಈ ಸಮಸ್ಯೆಗಳಿವೆ, ಇವೆಲ್ಲವನ್ನು ಅನ್ನುತ್ತಿರುವೆಯೆಂದರೆ ಇನ್ನೂ ಬೆಳೆದಿಲ್ಲವೆಂದೇ ಲೆಕ್ಕ.

ಯಾರಾಗಲಿ ಸರಿ ಆ ಸ್ಥಿತಿಗೆ ಬೆಳೆಯಬೇಕು, ಆ ಸ್ಥಿತಿಗೆ ಸೇರಿಕೊಳ್ಳಬೇಕು. ಇಲ್ಲಿ ಈ ರೀತಿಯಾದ ಭಾವಗಳನ್ನುಂಟು ಮಾಡುವುದು ಮನಸ್ಸೇ. ಮನಸ್ಸೊಂದರ ಇರುವಿಕೆ ಇರುವಷ್ಟು ಕಾಲ ಯಾರಿಗಾಗಲಿ ಈ ಭಾವಗಳಿರುತ್ತವೆ. ಯಾವಾಗಾದರೆ ನೀವು ತೀವ್ರವಾದ ಸಾಧನೆಯನ್ನು ಮಾಡುತ್ತಾ ಇರುತ್ತೀರೋ ಕೊನೆಗೆ ಈ ಮನಸ್ಸು ಶೂನ್ಯವಾಗುತ್ತಾ ಇರುತ್ತದೆ. ಯಾವಾಗಾದರೆ ಈ ಮನಸ್ಸೇ ಇಲ್ಲವೋ, ಇನ್ನು ಅಲ್ಲಿ

ಇವೆಲ್ಲವೂ ತಾನಾಗಿಯೇ ಅದೃಶ್ಯವಾಗಿ ಬಿಡುತ್ತವೆ. ಅದಕ್ಕೆ ಮನಸ್ಸಿದ್ದರೇನೇ ಮಾನವನು. ಆ ಮನಸ್ಸು ಯಾವಾಗಾದರೆ ಶೂನ್ಯವಾಯಿತೋ ಅವನೇ ಮಾಧವನು.

ಈ ಸ್ಥಿತಿಗೆ ಎಷ್ಟು ಬೇಗನೇ ಸೇರಿಕೊಂಡರೆ ನಿಮಗೆ ಅಷ್ಟು ಜನ್ಮಗಳು ಕಡಿಮೆಯಾಗುತ್ತವೆ, ಅಷ್ಟು ದುಃಖವು ಹೋಗುತ್ತದೆ. ಇನ್ನು ಸಮಸ್ಯೆಗಳೂ ಇರುವುದಿಲ್ಲ, ಆ ನೋವುಗಳೂ ಇರುವುದಿಲ್ಲ, ಮನಸ್ಸು ಇರುವವರೆಗೆ ಇವೆಲ್ಲಾ.

ಧ್ಯಾನದಲ್ಲಿ ಮೂರು ಸ್ಥಿತಿಗಳಿವೆ, ಪ್ರಾಥಮಿಕ ಸ್ಥಿತಿಯಲ್ಲಿ ಚಂಚಲ ಮನಸ್ಸು ನಿಶ್ಚಲವಾಗುತ್ತದೆ, ಎರಡನೆಯ ಸ್ಥಿತಿಯಲ್ಲಿ ನಿಶ್ಚಲವಾದ ಮನಸ್ಸು ನಿರ್ಮಲವಾಗಿ (ಶುದ್ಧವಾಗಿ) ತಯಾರಾಗುತ್ತದೆ, ಅಂದರೆ ಶುದ್ಧಿಯಾಗುತ್ತದೆ, ಮನಸ್ಸಿನ ಪ್ರಾಮುಖ್ಯತೆ ಕಡಿಮೆಯಾಗುತ್ತದೆ, ಇನ್ನೂ ನಿಧಾನವಾಗಿ ಸಾಧನೆ ಮುಂದುವರೆಸಿದರೆ ಈ ಪರಿಶುದ್ಧವಾದ ಮನಸ್ಸು ಶೂನ್ಯವಾಗುತ್ತಾ ಇರುತ್ತದೆ. ಹಾಗೆ ಶೂನ್ಯವಾಗಿ, ಪರಿಶೂನ್ಯವಾಗಿ ಕೊನೆಗೆ ಮಹಾ ಪರಿಶೂನ್ಯವಾಗಿ ಬಿಡುತ್ತದೆ.

ಆಗ ಯಾರಾನ್ನಾದರೆ ನೀವು ಮಹಾತ್ಮರು, ದೇವರುಗಳು ಎಂದು ಕೊಳ್ಳುತ್ತೀರೋ ಆ ಸ್ಥಿತಿಗೆ ಸೇರಿಕೊಳ್ಳುತ್ತೀರಿ.

ಆದ್ದರಿಂದ ಆ ಸ್ಥಿತಿಗೆ ಸೇರಿಕೊಳ್ಳುವವರೆಗೂ ತೀವ್ರ ಸಾಧನೆಯನ್ನು ಮಾಡಬೇಕು. ಈಗ ನೀವು ಸಂಸಾರದಲ್ಲಿ ಇದ್ದು ಆ ಸ್ಥಿತಿಯನ್ನು ಸಾಧಿಸುವುದುಕ್ಕೆ ಕೃಷಿ ಮಾಡುತ್ತಿದ್ದೀರಿ. ಆದ್ದರಿಂದ ಅಗತ್ಯಗಳನ್ನು ನೋಡಿಕೊಳ್ಳುತ್ತಾ ವಿರಾಮದ ಸಮಯದಲ್ಲಿ ವ್ಯರ್ಥ ಮಾಡದಂತೆ ಪತ್ರೀಜಿಯವರು ಹೇಳಿದಂತೆ ಸಾಧನೆಗೆ, ಸ್ವಾಧ್ಯಾಯಕ್ಕೆ, ಸಾಂಗತ್ಯಕ್ಕೆ, ಸೇವೆಗೆ ಕೊಡುತ್ತಾ ಆ ಸ್ಥಿತಿಯನ್ನು ಸಾಧಿಸುವ ಪ್ರಯತ್ನವನ್ನು ಮಾಡಬೇಕು.

ಆದಕಾರಣ ಈ ಜನ್ಮದಲ್ಲಿ ನೀವು ಮಾಡುವ ಕೃಷಿಯನ್ನಾಧರಿಸಿ, ಮರುಜನ್ಮ ಕೊನೆಯ ಜನ್ಮವನ್ನಾಗಿ ಮಾಡಿಕೊಳ್ಳಬಲ್ಲ ಅವಕಾಶ ನಿಮಗೆ ಬರುತ್ತದೆ. ನಿಮ್ಮ ಕೃಷಿ ಇನ್ನೂ ಹೆಚ್ಚಾಗಿದ್ದರೆ ಈ ಜನ್ಮವೇ ಕೊನೆಯ ಜನ್ಮ ಆಗಬಹುದಲ್ಲ! ಸಂಸಾರದಲ್ಲಿ ಇರುವಷ್ಟು ಕಾಲ ಮಾತ್ರ ಸಾಧ್ಯವಾಗದು ಎಂದೇನಿಲ್ಲ. ಆದ್ದರಿಂದ ಆಹಾರ ನಿಯಮಗಳನ್ನು ಪಾಲಿಸುತ್ತಾ ತೀವ್ರ ಸಾಧನೆಯನ್ನು ಮಾಡಬೇಕು.

ಮತ್ತೆ ರಮಣ ಮಹರ್ಷಿ ಎಲ್ಲಾ ಬಿಟ್ಟು, ಎಲ್ಲಿಯೋ ಕುಳಿತರೆ ಹುಚ್ಚನೆಂದು ಕೊಳ್ಳುತ್ತಿದ್ದರು ಎಲ್ಲರು. ಅದೇನು ಜೀವನ? ಎಂದುಕೊಳ್ಳುತ್ತಿದ್ದರು. ಕೊನೆಗೆ ಆತನು ಎಷ್ಟೋ ಶ್ರೇಷ್ಠವಾದವನಾದನು.

ಪತ್ರೀಜಿಯವರು ನಮ್ಮಂತವರಿಗೆ, ಈ ಜ್ಞಾನವನ್ನು, ಈ ಸತ್ಯವನ್ನು ತಿಳಿಸಬೇಕೆಂಬ ಪ್ರಣಾಳಿಕೆಯೊಂದಿಗೆ ಭೂಮಿಗೆ ಬಂದಿದ್ದಾರೆ. ಆದ್ದರಿಂದ ಊರೂರು ತಿರುಗಿ, ಎಷ್ಟೋ ದೇಶಗಳನ್ನು ತಿರುಗಿ ಈ ಸತ್ಯವನ್ನು ಒದಗಿಸಿದರು. ಅದಕ್ಕೆ ಇವರೆಲ್ಲರು ತಿಳಿದುಕೊಳ್ಳುವವರಾದರು.

ಒಬ್ಬರ ಪ್ರಣಾಳಿಕೆ ಒಂದೊಂದು ರೀತಿಯಲ್ಲಿ ಇರುತ್ತದೆ.

ನೀವು ಇದರಲ್ಲಿ ಲೀನವಾದಷ್ಟು ತಿಳಿಯದಂತೆಯೇ ನಿಮ್ಮಲ್ಲಿ ಆಸಕ್ತಿ ಹೆಚ್ಚುತ್ತದೆ. ನಿಮ್ಮಲ್ಲಿ ಬದಲಾವಣೆಗಳು ಬರುತ್ತವೆ. ಎಲ್ಲರೂ ಯಾವಾಗಲೂ ಒಂದೇ ರೀತಿಯಲ್ಲಿ ಇರುವುದಿಲ್ಲ! ಯಾವ ಕೆಲಸವನ್ನು ಮಾಡುತ್ತಿದ್ದರೂ ಇರಬೇಕಾದದ್ದು ಆಸಕ್ತಿ ಮಾತ್ರವೇ.

*****

**ಸೃಷ್ಟಿಯಲ್ಲಿ ಲೆಕ್ಕ ಯಾವಾಗಲೂ ಸರಿಯಾಗಿಯೇ ಇರುತ್ತದೆ. ನಮ್ಮ ಬುದ್ಧಿಯೇ ಆಗಾಗ ಹುಚ್ಚು ಹುಚ್ಚಾಗಿ ಇರುತ್ತದೆ. ಆ ಹುಚ್ಚನ್ನು ಸರಿ ಮಾಡಿಕೊಳ್ಳುವುದಕ್ಕೆ ಈ ಧ್ಯಾನವು.**

**–ಬ್ರಹ್ಮರ್ಷಿ ಪಿತಾಮಹ ಪತ್ರೀಜಿ**

**ನಮ್ಮ ಗುರಿಯಾದ ಪೂರ್ಣಾತ್ಮ ಸ್ಥಿತಿಗೆ ಸೇರಿಕೊಳ್ಳಬೇಕೆಂದರೆ ಧ್ಯಾನ, ಸ್ವಾಧ್ಯಾಯ, ಸಜ್ಜನ ಸಾಂಗತ್ಯವೆಂಬ ಆಧ್ಯಾತ್ಮಿಕ ತ್ರಿರತ್ನಗಳೊಂದಿಗೆ ಆಧ್ಯಾತ್ಮಿಕ ಸೇವೆಯನ್ನು ಮಾಡುವುದು ಖಡ್ಡಾಯ.**

**–ಪತ್ರೀಜಿ**

**ಧ್ಯಾನವನ್ನು ಕಲಿತುಕೊಳ್ಳುವುದರಲ್ಲಿ, ಧ್ಯಾನವನ್ನು ಹಂಚುವುದರಲ್ಲಿ ಪಿರಮಿಡ್ ಮಾಸ್ಟರ್‌ಗಳು ಆಸೆಬುರುಕರು.**

**–ಪತ್ರೀಜಿ**

# 'ಶಂಕರಾಚಾರ್ಯರು ಹೇಳಿದ ಆರನೆಯ ಶ್ಲೋಕ'

ಬ್ರಹ್ಮವೊಂದರ ಲಕ್ಷಣಗಳನ್ನು ಎಷ್ಟೋ ರೀತಿಯಲ್ಲಿ, ಎಷ್ಟೋ ಕೋನಗಳಲ್ಲಿ ನಿರ್ವಾಣ ಷಟ್ಕದಲ್ಲಿ ಶಂಕರಾಚಾರ್ಯರು ವಿವರಿಸಿದ್ದಾರೆ. ಮತ್ತೇ ಅದರಲ್ಲಿ 6ನೇ ಶ್ಲೋಕವನ್ನು ಕುರಿತು ತಿಳಿದುಕೊಳ್ಳೋಣ.

**ಶ್ಲೋಕ ॥ ಅಹಂ ನಿರ್ವಿಕಲ್ಪೋ ನಿರಾಕಾರ ರೂಪೋ**
**ವಿಭುತ್ವಾ ಚ್ಚ ಸರ್ವತ್ರ ಸರ್ವೇಂದ್ರಿಯಾಣಾಂ ॥**
**ನ ಚಾ ಸಂಗತಂ ನೈವ ಮುಕ್ತಿ ರ್ನ ಮೇಮಃ**
**ಚಿದಾನಂದ ರೂಪಃ ಶಿವೋಹಂ, ಶಿವೋಹಂ॥**

**ತಾತ್ಪರ್ಯ:** ನಾನು ಯಾವ ವಿಧವಾದ ವಿಶೇಷಗಳಿಲ್ಲದವನು, ನಿರಾಕಾರನು, ವ್ಯಾಪಕನು, ನಾನು ಸರ್ವದೇಶಗಳಲ್ಲೂ, ಸರ್ವಕಾಲಗಳಲ್ಲೂ, ಸರ್ವ ವಸ್ತುಗಳಲ್ಲಿಯು ಇರುವವನು. ಆದ್ದರಿಂದಲೇ ನನ್ನ ಸ್ವರೂಪವು ನಿಖಿಲೇಂದ್ರಿಯಗಳಿಗೂ ವ್ಯಕ್ತವಾಗುತ್ತಾ, ತಿಳಿಯುತ್ತಾ ಇರುತ್ತದೆ. ನಾನು ಮುಕ್ತನು ಅಲ್ಲ, ಬದ್ಧನು ಅಲ್ಲ, ನಾನು ಸಂಗವಿರುವವನಲ್ಲ, ನಾನು ಕೇವಲ ಜ್ಞಾನಾನಂದವಾದ ಆತ್ಮನು. ಚಿದಾನಂದ ಸ್ವರೂಪನಾದ ಶಿವನೇ ನಾನು, ಶಿವನೇ ನಾನು.

ನಾನು ಯಾವ ವಿಧವಾದ ವಿಶೇಷಗಳಿಲ್ಲದವನು ಅಂದರೆ ನನಗೆ ಯಾವ ವಿಧವಾದ ಪ್ರತ್ಯೇಕತೆಗಳೂ ಇಲ್ಲ. ನಿರಾಕಾರನು ಅಂದರೆ ನನಗೆ ಯಾವ ಆಕಾರವೂ ಇಲ್ಲ. ನಾನು ವ್ಯಾಪಕನು ಅಂದರೆ ಎಲ್ಲಾ ಕಡೆಯಲ್ಲೂ ವ್ಯಾಪಿಸಿರುವೆನು. ನಾನು ಸರ್ವ ದೇಶಗಳಂದು, ಅಂದರೆ ಎಲ್ಲಾ ದೇಶಗಳಲ್ಲಿ, ಸರ್ವ ಕಾಲಗಳಲ್ಲಿ ಅಂದರೆ ಭೂತ, ಭವಿಷ್ಯತ್, ವರ್ತಮಾನ ಕಾಲಗಳಲ್ಲಿ, ಸರ್ವ ವಸ್ತುಗಳಲ್ಲಿಯೂ ಕೂಡಾ ಅಂದರೆ ಸೃಷ್ಟಿಯಲ್ಲಿ ಏನೇನು ಇವೆಯೋ ಅವುಗಳೆಲ್ಲದರಲ್ಲೂ... ಅಂದರೆ 84 ಲಕ್ಷ ಜೀವಿಗಳೇ ಅಲ್ಲ, ಚರಗಳೇ ಅಲ್ಲ, ಅಚರಗಳೇ ಅಲ್ಲ, ಎಲ್ಲದರಲ್ಲೂ ನಾನಿದ್ದೇನೆ.

ಆದ್ದರಿಂದ ನನ್ನ ಸ್ವರೂಪವು ನಿಖಿಲೇಂದ್ರಿಯಗಳಿಗೆ, ಎಲ್ಲರಿಗೆ ಎಲ್ಲವುಗಳಿಗೆ ಸಂಗತವಾಗುತ್ತಲೇ ಇರುತ್ತದೆ ಅಂದರೆ ತಿಳಿಯುತ್ತಲೇ ಇರುತ್ತದೆ. ಇಲ್ಲಿ

ಶಂಕರಾಚಾರ್ಯರು ಬ್ರಹ್ಮನ ಕುರಿತು ಹೇಳುವುದಲ್ಲ. ಅವರು ನಾನು ಎಂಬ ಪದವನ್ನು ಹೇಳುತ್ತಿದ್ದಾರೆ. ಇಲ್ಲಿ ನೀವು ಗಮನಿಸಿದರೆ ಈ ದೇಹವು ನಾನು ಎಂದು ಕೊಳ್ಳುತ್ತಿದ್ದೀರಿ. ಆದರೆ ಈ ದೇಹವು ನಾನಲ್ಲ. ಈ ಕುಲ ನಾನೆಂದು ಕೊಳ್ಳುತ್ತಿದ್ದೀರಿ. ಈ ಪ್ರಾಂತ್ಯವು ನಾನೆಂದು ಕೊಳ್ಳುತ್ತಿದ್ದೀರಿ. ಈ ಮತವು ನಾನು ಎಂದುಕೊಳ್ಳುತ್ತಿದ್ದೀರಿ. ಇವು ಯಾವುವು ನಿಮಗೆ ಸಂಬಂಧವಿಲ್ಲ ನಿನ್ನದು ಒಂದು ಪ್ರಾಂತ್ಯವಲ್ಲ, ನೀನು ಎಲ್ಲೆಲ್ಲೂ ಇರುವೆ. ಏನೋ ಒಂದು ಜಾತಿಗೆ ಸಂಬಂಧಿಸಿದವನು ಅಲ್ಲ, ಎಲ್ಲವುದಕ್ಕೂ ಸಂಬಂಧಿಸಿದವನು. ಒಂದು ಮತಕ್ಕೆ ಸಂಬಂಧಿಸಿದವನು ಅಲ್ಲ, ಎಲ್ಲಾ ಮತಗಳು ನಿನ್ನದೇ ಪತ್ರೀಜಿಯವರೂ ಕೂಡಾ ಅದನ್ನೇ ಹೇಳಿದ್ದಾರೆ.

ಈಗ ನಾನು ಹಿಂದೂ ಮತದಲ್ಲಿ ಬ್ರಾಹ್ಮಣನಾಗಿ ಜನ್ಮವನ್ನು ತೆಗೆದುಕೊಂಡಿದ್ದೇನೆ ಅಂದರೆ ಬ್ರಹ್ಮವಾದ ನಾನು ಬ್ರಾಹ್ಮಣ ಕುಟುಂಬದಲ್ಲಿ ಶರೀರವನ್ನು ತೆಗೆದುಕೊಂಡಿದ್ದೇನೆ. ನಾನು ಬ್ರಾಹ್ಮಣನೆಂದು ಕೊಳ್ಳುತ್ತಿದ್ದೀರಿ ನೀವು, ಆದರೆ ಇದಕ್ಕೂ ಮೊದಲಿನ ಜನ್ಮದಲ್ಲಿ ನಾನು ಒಬ್ಬ ಮುಸ್ಲಿಂ ಸೂಫಿ ಮಾಸ್ಟರ್ ಆಗಿ, ಹೈದ್ರಾಬಾದಿನಲ್ಲಿ ನಾನು ಜನಿಸಿದ್ದೆನು. ಅದಕ್ಕೂ ಮೊದಲು ಅಮೇರಿಕಾದಲ್ಲಿ ಒಬ್ಬ ಕ್ರಿಶ್ಚಿಯನ್ ಬೆಂಜಿಮೆನ್ ಫ್ರಾಂಕ್ಲಿನ್ ಆಗಿ ಜನ್ಮವನ್ನು ತೆಗೆದುಕೊಂಡೆನು. ಅದಕ್ಕೂ ಮೊದಲು ಬುದ್ಧನ ಬಳಿ ಆನಂದನು, ಬೌದ್ಧನು. ಈಗ ನಾನು ಯಾವ ಮತಕ್ಕೆ ಸೇರಿದವನೋ? ನೀವೇ ಹೇಳಿ ಎಂದು ಕೇಳಿದರು.

ಆದ್ದರಿಂದ ಯಾವ ಮತವೂ ನನ್ನದಲ್ಲ. ಯಾವ ಮತವು ನಾನಲ್ಲ. ಅವುಗಳೊಂದಿಗೆ ನನಗೆ ಸಂಬಂಧವಿಲ್ಲ. ನಾನು ಆತ್ಮನು, ನಾನು ಬ್ರಹ್ಮನು ನಾನು ಸರ್ವ ವಸ್ತುಗಳಲ್ಲಿ, ಸರ್ವ ದೇಶಗಳಲ್ಲಿ, ಸರ್ವ ಕಾಲಗಳಲ್ಲಿ ಕೂಡಾ ಇರುವವನು. ಏನೋ ಒಬ್ಬ ಹಿಂದುವಾಗಿ ಒಂದು ಜನ್ಮದಲ್ಲಿದ್ದು, ಮುಸ್ಲಿಂನಾಗಿ ಒಂದು ಜನ್ಮದಲ್ಲಿದ್ದು, ಹಾಗೆ ಇರುವವನು ಅಲ್ಲ ನಾನು. ಯಾವಾಗಲೂ ಇರುತ್ತೇನೆ, ಎಲ್ಲಾ ಕಡೆಗೂ ಇರುತ್ತೇನೆ, ಎಲ್ಲೆಲ್ಲಿಯೂ ಇರುತ್ತೇನೆ.

ಯಾವುದಾದರೆ ನಾವು ಈಗ ಅಂದುಕೊಳ್ಳುತ್ತಿದ್ದೇವೋ ಅವು ಯಾವುವೂ ನಾನಲ್ಲ. ಈಗ ನೀವು ನೋಡಿ, ಪ್ರಪಂಚದಲ್ಲಿ ಯಾವುದೋ ಒಂದು ಪ್ರಾಂತದಲ್ಲಿ ಎಷ್ಟೋ ಯುದ್ಧಗಳು ನಡೆಯುತ್ತಲೇ ಇವೆ. ಒಬ್ಬರ ಮೇಲೆ ಒಬ್ಬರು ಬಾಂಬುಗಳನ್ನು ಹಾಕಿಕೊಳ್ಳುತ್ತಿದ್ದಾರೆ. ಟೆಕ್ನಾಲಜಿ ಬೆಳೆದು ತರತರದ ದೊಡ್ಡ ದೊಡ್ಡ ಆಯುಧಗಳನ್ನು ತಯಾರು ಮಾಡಿಕೊಂಡು ಒಬ್ಬರನ್ನೊಬ್ಬರು ನಾಶ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಮುಖ್ಯ

ಕಾರಣ ಏನೆಂದರೆ? ಆ ದೇಶ ನನ್ನದಲ್ಲ, ಅವರು ಬೇರೆ, ಇವರು ಬೇರೆ, ಅವರ ಮತ ಬೇರೆ, ನನ್ನ ಮತ ಬೇರೆ ಎಂದು ದ್ವೇಷಿಸಿಕೊಳ್ಳುತ್ತಾ ಶತೃತ್ವವನ್ನು ಹೆಚ್ಚಿಸಿಕೊಂಡು ಹೀಗೆ ಯುದ್ಧಗಳನ್ನು ಮಾಡಿ ಎಷ್ಟೋ ನಷ್ಟಪಡಿಸಿಕೊಳ್ಳುತ್ತಿದ್ದಾರೆ.

ಎಷ್ಟೋ ಕೋಟ್ಯಾನು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅಭಿವೃದ್ಧಿ ಮಾಡಿಕೊಂಡಂತಹ ದೇಶವನ್ನು ಸರ್ವನಾಶನ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣ ಏನು ಅಂದರೆ ಶಂಕರಾಚಾರ್ಯರು ಹೇಳಿರುವಂತ ಈ ಸತ್ಯವನ್ನು ತಿಳಿಯದೇ ಹೋಗಿರುವುದೇ. ಎಲ್ಲಾ ಒಂದೇ ಇಷ್ಟು ಜನರಲ್ಲಿ, ನಿಜವಾಗಿ ಪರಬ್ರಹ್ಮದ ಹೊರತು ಬೇರೊಂದು ಇಲ್ಲ, ಎಲ್ಲಾ ಆತನಲ್ಲಿಯ ಭಾಗಗಳೇ.

ಬಂಗಾರದ ವಸ್ತುಗಳು ವಿವಿಧ ರೀತಿಯಲ್ಲಿರುತ್ತವೆ, ಅವುಗಳಿಗೆ ಅನೇಕ ಹೆಸರುಗಳು, ತರತರದ ಆಕಾರಗಳಿರುತ್ತವೆ. ಅವುಗಳಿಗೆ ತರತರದ ಉಪಯೋಗಗಳು ಇರುತ್ತವೆ. ಆದರೆ ಎಲ್ಲವೂ ಬಂಗಾರದಿಂದ ಬಂದವೇ. ಮತ್ತೆ ಎಲ್ಲಾ ವಸ್ತುಗಳನ್ನು ಕರಗಿಸಿದರೆ ಬಂಗಾರವಾಗಿ ಬಿಡುತ್ತದೆ. ಮತ್ತೇ ಅವು ತರತರ ವಸ್ತುಗಳಾ ಅಂದರೆ ಅಲ್ಲವೇ ಅಲ್ಲ. ಎಲ್ಲಾ ಬಂಗಾರದಿಂದ ಬಂದವೇ.

ಹಾಗೆಯೇ ಈ ಬ್ರಹ್ಮದಿಂದಲೇ ಇಷ್ಟು ರೀತಿಯ ಜೀವರಾಶಿಗಳು, ಮಾನವರು, ಇಷ್ಟು ಪ್ರಪಂಚವು, ಇಷ್ಟು ದೇಶಗಳು ಏರ್ಪಟ್ಟಿವೆ. ಆದರೆ ಕೊನೆಗೆ ಇವೆಲ್ಲಾ ಅದೃಶ್ಯವಾಗಿ ಬ್ರಹ್ಮದಲ್ಲಿಯೇ ಸೇರಿ ಹೋಗುತ್ತವೆ. ನೀವು ಒಂದು ವಿಷಯವನ್ನು ನೆನಪಿಟ್ಟುಕೊಳ್ಳಿ. ಯಾವುದಾದರೆ ಸೃಷ್ಟಿಸಲ್ಪಟ್ಟಿದೆಯೋ ಅದು ಸ್ವಲ್ಪ ಕಾಲವೇ ಇರುತ್ತದೆ, ಮತ್ತೇ ಅದೃಶ್ಯವಾಗಿ ಬಿಡುತ್ತದೆ. ಎಷ್ಟೋ ಬದಲಾವಣೆಯಾಗುತ್ತದೆ. ಎಲ್ಲರೂ ಇರುತ್ತಾರೆ ಎಂಬ ಭಾವದಿಂದ ಈ ದ್ವೇಷಗಳು ಈ ಕಕ್ಷೆಗಳು, ಕಾರ್ಪಣ್ಯಗಳು, ಒಬ್ಬರನ್ನೊಬ್ಬರು ನಾಶ ಮಾಡಿಕೊಳ್ಳುವಂತವುಗಳನ್ನು ಮಾಡುತ್ತಿದ್ದಾರೆ.

ಅದಕ್ಕೆ ಪತ್ರೀಜಿಯವರು ಪ್ರತಿಯೊಬ್ಬರು ಜ್ಞಾನವಂತರಾಗಿರೆನ್ನುತ್ತಾರೆ. ಆ ಜ್ಞಾನವನ್ನು ಸಂಪಾದಿಸಬೇಕೆಂದರೆ 'ಶ್ವಾಸದ ಮೇಲೆ ಗಮನ' ಧ್ಯಾನವನ್ನು ಮಾಡಬೇಕೆಂದಿದ್ದಾರೆ. ಆ ಜ್ಞಾನವನ್ನೇ ಪ್ರಪಂಚ ವ್ಯಾಪ್ತಿಯಾಗಿ ಬೋಧಿಸಿದರು. ಪ್ರತಿಯೊಬ್ಬರನ್ನು ಅಜ್ಞಾನವನ್ನು ತೊಲಗಿಸಿಕೊಳ್ಳಿರಿ ಎಂದರು. ಇತರರು ಬೇರೆ ಎಂದು ಕೊಳ್ಳುವುದೇ ಅಜ್ಞಾನ. ಎಲ್ಲಾ ಒಂದೇ ಎಂಬ ಸ್ಥಿತಿಗೆ ಬರುವುದೇ ಜ್ಞಾನ. ಇನ್ನು ನಿಮ್ಮಲ್ಲಿ ಎಷ್ಟು ಮಾತ್ರವಾದರೂ ಬೇರೆಯೆಂಬ ಭಾವವಿದ್ದರೂ ನೀವು ಅಜ್ಞಾನದಲ್ಲಿ ಇದ್ದಂತೆಯೇ.

ನಷ್ಟವೇನಿದೇರೀ, ಅಜ್ಞಾನದಲ್ಲಿದ್ದರೆ! ಎನ್ನುತ್ತಾರೆ, ನಷ್ಟವೇನೂ ಇಲ್ಲ, ನೀನು ಇನ್ನೂ ಬಹಳ ಜನ್ಮಗಳನ್ನು ತೆಗೆದುಕೊಳ್ಳುವೆ ಅಷ್ಟೇ. ತೆಗೆದುಕೊಂಡರೆ ನಷ್ಟವೇನಿದೆ? ಜನ್ಮಗಳನ್ನು ತೆಗೆದುಕೊಂಡರೆ ನಷ್ಟವೇನೂ ಇಲ್ಲ. ಆದರೆ ಯಾವುದಾದರೆ ದುಃಖ ಬಂದರೂ, ಕಷ್ಟ ಬಂದರೂ, ಸಮಸ್ಯೆ ಬಂದರೂ, ಭಾದೆಪಡುವೆ! ಏಕೆ ಕಷ್ಟ ಬಂದಿತು? ನಾನು ಬೇರೆ, ಕೋಳಿ ಬೇರೆ, ಅವುಗಳು ನಾನು ತಿನ್ನುವುದಕ್ಕೇ ಇವೆ ಎಂದು ತಿನ್ನುವುದರಿಂದ. ಅದರ ಫಲವಾಗಿ ರೋಗಗಳನ್ನು, ಕಷ್ಟಗಳನ್ನು ತಂದುಕೊಳ್ಳುತ್ತೀರಿ, ನಂತರ ನೋವು ಪಡುತ್ತೀರಿ. ಆ ಬಾಧೆಪಟ್ಟಾಗ ಏಕೆ ಬಂತಪ್ಪ ಇಂತಹ ಜೀವನವೆಂದುಕೊಳ್ಳುತ್ತೀರಿ.

ಯಾರಾದರೆ ಎಲ್ಲಾ ಒಂದೇ, ಎಲ್ಲರೂ ಒಂದು ಎಂದು ತಿಳಿದುಕೊಳ್ಳುತ್ತಾರೋ, ಆ ಸ್ಥಿತಿಗೆ ಬರುತ್ತಾರೋ, ಎಲ್ಲವನ್ನು, ಎಲ್ಲರನ್ನು ಗೌರವಿಸುತ್ತಾರೆ. ಎಲ್ಲರೊಂದಿಗೆ ಸ್ನೇಹಪೂರ್ವಕವಾಗಿ, ಆನಂದದಿಂದ ಜೀವಿಸ ಬಲ್ಲವರಾಗುತ್ತಾರೆ. ಕೊನೆಗೆ ಜ್ಞಾನವನ್ನು ಹೊಂದಿ ಜನ್ಮವಿಲ್ಲದ ಸ್ಥಿತಿಗೆ ಸೇರಿಕೊಳ್ಳುತ್ತಾರೆ.

ನೀನು ಈಗಲ್ಲ, ಇನ್ನೊಂದು 50 ಜನ್ಮಗಳನ್ನೆತ್ತಿದರೂ, ಇನ್ನು 60 ಜನ್ಮಗಳನ್ನೆತ್ತಿದರೂ ಕೊನೆಗೆ ಸಾಧಿಸಬೇಕಾದದ್ದು ಅದೇ. ತಿಳಿದುಕೊಳ್ಳಬೇಕಾದ್ದು ಅದೇ. ಯಾವುದಾದರೆ ನಾನು, ನಾನು ಎಂದುಕೊಳ್ಳುತ್ತಿರುವೆಯೋ ಅದು ಯಾವುದೂ ನಾನಲ್ಲ ಎಂಬ ವಿಷಯವನ್ನು ತಿಳಿದುಕೊಳ್ಳುವವರೆಗೆ ನೀವು ಹಾಗೆ ಜನ್ಮಗಳನ್ನು ತೆಗೆದುಕೊಳ್ಳುತ್ತಾ, ದುಃಖಪಡುತ್ತಾ ಇರಬೇಕಾದದ್ದೇ. ಆದ ಕಾರಣ ಇವೇನು ನಾನಲ್ಲ, ನಾನು ಆತ್ಮನು, ನಾನು ಶಿವನು, ನಾನು ಬ್ರಹ್ಮನು. ಅದನ್ನು ತಿಳಿದುಕೋ ಎನ್ನುತ್ತಿದ್ದಾರೆ ಶಂಕರಾಚಾರ್ಯರು.

ಆದ ಕಾರಣ ಈ ನಿರ್ವಾಣ ಷಟ್ಕವನ್ನು ಆಧರಿಸಿ ಮುಕ್ತ ಸ್ಥಿತಿಯನ್ನು ಹೊಂದಿದವರು ಯಾವ ರೀತಿಯಾದ ಸ್ಥಿತಿಯಲ್ಲಿರುತ್ತಾರೆಂದರೆ? ನಾನು ಯಾವ ವಿಧವಾದ ವಿಶೇಷಗಳಿಲ್ಲದವನು, ನಿರಾಕಾರನು, ಸರ್ವವ್ಯಾಪಕನು, ಸರ್ವ ಕಾಲ, ಸರ್ವ ವಸ್ತುಗಳಲ್ಲಿ, ಸರ್ವ ದೇಶಗಳಲ್ಲಿ ಇರುವವನು ಎಂದು ತಿಳಿದುಕೊಳ್ಳುತ್ತಾನೆ. ನಾನು ಕೇವಲ ಜ್ಞಾನಾನಂದವಾದ ಆತ್ಮನು, ಚಿದಾನಂದ ಸ್ವರೂಪನಾದ ಶಿವನು. ಅಂದರೆ ನಾನು ಬ್ರಹ್ಮ ಎಂದು ತಿಳಿದುಕೊಳ್ಳುತ್ತಾನೆ. ಹಾಗೆ ತಿಳಿದುಕೊಂಡವನ ವರ್ತನೆಯು ಕೂಡಾ ಅದಕ್ಕೆ ತಕ್ಕಂತೆಯೇ ಇರುತ್ತದೆ, ಬದಲಾಗುತ್ತದೆ.

ಪತ್ರೀಜಿಯವರು ಒಂದು ಸಂದರ್ಭದಲ್ಲಿ ಹೇಳಿದ್ದಾರೆ. ಯಾರನ್ನು ನೋಡಿದರೂ ನಾನೇ ಅಲ್ಲವೇ ಎಂಬ ಭಾವ ನಿಮ್ಮಲ್ಲಿ ಏರ್ಪಡಬೇಕು. ನೋಡಲು ಬೇರೆಯಾಗಿಯೇ

ಇರುತ್ತಾರೆ. ಆದರೆ ಆ ಭಾವವಿರಬೇಕು. ತಾನೇ ಇಷ್ಟು ರೂಪಗಳಲ್ಲಿ ಇದ್ದೇನೆಂದು ತಿಳಿದುಕೊಂಡವನು ಯಾರನ್ನು ಅವಮಾನಿಸನು, ಯಾರನ್ನು ನಷ್ಟಪಡಿಸನು, ಯಾರನ್ನು ಕಷ್ಟಪಡಿಸನು, ಯಾರನ್ನು ಏನು ಮಾಡಿದರೂ ತನಗೆ ತಾನು ಮಾಡಿಕೊಂಡಂತೆಯೇ ಅಲ್ಲವೇ? ಆದ್ದರಿಂದ ಅಂತಹ ಕೆಲಸಗಳನ್ನು ಏನು ಮಾಡುವುದಿಲ್ಲ. ಹಾಗೆಯೇ ಯಾವ ಪ್ರಾಣಿಯನ್ನು ಸಾಯಿಸಿದರೂ, ಹಿಂಸಿಸಿದರೂ, ಭಕ್ಷಿಸಿದರೂ, ತನ್ನನ್ನು ತಾನು ಹಿಂಸಿಸಿಕೊಂಡಂತೆಯಲ್ಲವೇ? ಆದ್ದರಿಂದ ಯಾವ ಪ್ರಾಣಿಗಳನ್ನು, ಪಕ್ಷಿಗಳನ್ನು ಹಿಂಸಿಸನು, ಸಾಯಿಸನು, ಭಕ್ಷಿಸನು.

ಮೇಲಾಗಿ ಪ್ರೀತಿಸುತ್ತಾನೆ, ರಕ್ಷಿಸುತ್ತಾನೆ, ಸ್ನೇಹ ಮಾಡುತ್ತಾನೆ. ಎಲ್ಲರನ್ನು, ಎಲ್ಲವನ್ನು ತನ್ನ ಸಮಾನವಾಗಿ ನೋಡಿಕೊಳ್ಳುತಾನೆ. ಇಲ್ಲಿ ಒಂದು ಸಂದೇಹ ಬರುತ್ತದೆ. ಎಲ್ಲಾ ಒಂದೇ ಆದರೆ ! ಎಲ್ಲಾ ನಾನೇ ಆದರೆ! ನನ್ನ ಹೆಂಡತಿಯೊಂದಿಗೆ ಸಂಸಾರವನ್ನು ಮಾಡಬೇಕೆನ್ನುತ್ತೀರಾ? ಬೇಡವೆನ್ನುತ್ತೀರಾ? ಎಂದು ಕೇಳುತ್ತೀರಿ. ಹಾಗೆಯೇ ಕೆಲವರು ನನ್ನ ಕೆಲಸವನ್ನು ಅವನಿಂದ ಆ ಕೆಲಸವನ್ನು ಮಾಡಿಸಿಕೊಳ್ಳಬೇಕೆನ್ನುತ್ತೀರಾ? ಬೇಡವೆನ್ನುತ್ತೀರಾ? ಎಂದು ಕೂಡಾ ಕೇಳುತ್ತಾರೆ.

ಹಾಗಾಗಿ ವಶಿಷ್ಟರು ಏನು ಬೋಧಿಸಿದ್ದಾರೆಂದರೆ, ಕರ್ಮಗಳಲ್ಲಿ ದ್ವೈತವನ್ನು, ಭಾವದಲ್ಲಿ ಅದ್ವೈತವನ್ನು ಆಶ್ರಯಿಸಬೇಕೆನ್ನುತಾರೆ. ಕರ್ಮಗಳಲ್ಲಿ ದ್ವೈತವನ್ನು ಅಂದರೆ ನೀನು ಕೆಲಸಗಳನ್ನು ಮಾಡುತ್ತಿರುವಾಗ ಅವನು ನನ್ನ ಗಂಡ, ಆಕೆ ನನ್ನ ಹೆಂಡತಿ ಎನ್ನುವಂತೆ ಕರ್ಮಗಳನ್ನು ಮಾಡಬೇಕು. ಹೆಂಡತಿ, ಹೆಂಡತಿಯಂತೆ ಜೀವಿಸುತ್ತಾ, ತನ್ನ ಧರ್ಮವನ್ನು ನಿರ್ವಹಿಸಬೇಕು. ಗಂಡ ಗಂಡನಂತೆ ಜೀವಿಸುತ್ತಾ, ತನ್ನ ಧರ್ಮವನ್ನು ನಿರ್ವಹಿಸಬೇಕು. ಮಾನವನು ಮಾನವನಾಗಿಯೇ ಇರಬೇಕು. ನೀನು ಕೆಲಸದವನಿಗೆ ಕೆಲಸವನ್ನು ಹೇಳುವುದು ಬಿಟ್ಟರೆ, ಅವನಿಂದ ನಾನು ಕೆಲಸ ಮಾಡಿಸಿಕೊಳ್ಳುವುದೇನು? ಅಂದುಕೊಂಡರೆ ಅವನು ಹೇಗೆ ಬದುಕುತ್ತಾನೆ? ಆ ಅನುಭವಗಳನ್ನು ಹೇಗೆ ಹೊಂದುತ್ತಾನೆ? ಆ ಪಾಠಗಳನ್ನು ಹೇಗೆ ಕಲಿಯುತ್ತಾನೆ?.

ಆದ್ದರಿಂದ ಅವನು ನಾನು ಒಂದೇ ಎಂಬ ಭಾವದಿಂದ ಅವನನ್ನು ಗೌರವಿಸುತ್ತಾ, ಅವನನ್ನು ಏನೂ ಬಾಧಿಸದೆ, ಅವನನ್ನು ನಿನ್ನ ಸಮಾನವಾಗಿ ನೋಡಿಕೊಳ್ಳುತ್ತಿರಬೇಕು. ಒಂದು ಬಾರಿ ನಾನು ಪತ್ರೀಜಿಯವರೊಂದಿಗೆ ಭೂತಾನ್‌ಗೆ ಹೋದೆನು. ಅಲ್ಲಿ ಒಂದು ಬೆಟ್ಟದ ಮೇಲೆ ಟ್ರಕ್ಕಿಂಗ್‌ಗೆ ಹೋಗಬೇಕು. ಅಂದರೆ ನಡೆಯುವವರು ನಡೆಯಬಹುದು, ನಡೆಯಲಾರದವನು ಕುದುರೆಯನ್ನೇರಿ ಹೋಗಬಹುದು. ಕುದುರೆ ಇಂತಿಷ್ಟು ಎಂದು ಏನೋ ಕೊಡಬೇಕಾಗಿ ಬರುತ್ತದೆ. ಆಗ ನಾನು ಎಲ್ಲಿ ನಡೆಯಬಲ್ಲೆನು! ಈ ಬೆಟ್ಟಗಳನ್ನು

ಹತ್ತಿ ಎಲ್ಲಿ ಇಳಿಯುತ್ತೇನೆ! ಏಕಪ್ಪ ಇದರ ಗೊಡವೆ ಎಂದು ಕುದುರೆ ಏರಿ ಹೋಗೋಣ ಅಂದುಕೊಂಡೆ. ಆದರೆ ಆ ಕುದುರೆ, ನಾನು ಒಂದೇ ಅಲ್ಲವೇ! ಅದರ ಮೇಲೆ ಏರಿ ಅದನ್ನು ನಾನು ಏಕೆ ಬಾಧೆ ಪಡಿಸಬೇಕು ಎಂದು ನನ್ನ ಕೊಠಡಿಯಲ್ಲಿಯೇ ಉಳಿದು ಬಿಟ್ಟೆನು.

ನಂತರ ಒಂದು ಸಂದರ್ಭದಲ್ಲಿ ಪತ್ರೀಜಿಯವರು ಹೇಳಿದರು ನೀನು ಅದನ್ನು ಏಕೆ ನೋವುಪಡಿಸುವುದು ಎಂದು ಕುದುರೆಯನ್ನೇರುವುದನ್ನು ಬಿಟ್ಟರೆ, ಆ ಕುದುರೆಯವನಿಗೆ ಆ ಹಣವನ್ನು ಕೊಡದಿದ್ದರೆ, ಅದಕ್ಕೆ ಅವನು ತಿಂಡಿ, ಹುಲ್ಲು ಹೇಗೆ ಕೊಡುತ್ತಾನೆ? ಅದನ್ನು ಹೇಗೆ ಪೋಷಿಸುತ್ತಾನೆ? ಆದ್ದರಿಂದ ನಿನ್ನ ಧರ್ಮವಾಗಿ ನೀನು ಕೊಡಬೇಕಾದದ್ದನ್ನು ಕೊಡು ಅವನು ಅದನ್ನು ಪೋಷಿಸುತ್ತಾನೆ. ಆ ಕುದುರೆ ಅದರ ಕೆಲಸವನ್ನು ಅದು ಮಾಡುತ್ತದೆ ಎಂದು ಹೇಳಿದರು. ಆಗ ಅರ್ಥವಾಯಿತು.

ಆದ್ದರಿಂದ ಅದನ್ನು ಏರು (ಹತ್ತು), ಅದಕ್ಕೆ ಸಮಯಕ್ಕೆ ಸರಿಯಾಗಿ ನೀರು, ಆಹಾರವನ್ನು ಯಾವ ಕೊರತೆಯೂ ಇಲ್ಲದಂತೆ ಇಡು. ಅದಕ್ಕೆ ಕೊಡದಿದ್ದರೆ ನಿತ್ರಾಣಗೊಂಡಾಗ ನೀವು ಅದನ್ನು ಎಂಜಾಯ್ ಮಾಡಬೇಕೆಂದರೆ ಅದು ವಿರುದ್ಧವಾದದ್ದು. ಆದ್ದರಿಂದ ಭಾವದಲ್ಲಿ ಅದ್ವೈತವನ್ನು, ಕರ್ಮದಲ್ಲಿ ದ್ವೈತ ಇರಬೇಕು. ಕರ್ಮವನ್ನು ಮಾಡುವಾಗ ಹೆಂಡತಿ ಹೆಂಡತಿಯೇ, ಗಂಡ–ಗಂಡನೇ, ಕೆಲಸದವನು ಕೆಲಸದವನೇ, ಯಜಮಾನಿ ಯಜಮಾನಿಯೇ ಎಂಬ ಭಾವದಲ್ಲಿ ಇಬ್ಬರೂ ಸಮಾನವೇ. ಹೆಂಡತಿಯನ್ನು ಪ್ರೀತಿಸು, ಆಕೆಗೆ ಯಾವ ತೊಂದರೆಯೂ, ಕೊರತೆಯೂ ಇಲ್ಲದಂತೆ ನೋಡು. ಗಂಡನನ್ನ ಪ್ರೀತಿಸು, ಆತನ ಬಗ್ಗೆ ನಿನ್ನ ಧರ್ಮವನ್ನು ನೀನು ನಿರ್ವಹಿಸು. ಅದು ವಶಿಷ್ಟರು ಹೇಳಿದಂತ ವಿಷಯ.

ಆದ್ದರಿಂದ ಯಾರ ವರ್ತನೆಯಾದರೆ ಶಂಕರಾಚಾರ್ಯರು ಬೋಧಿಸಿದ ವಿಧವಾಗಿ ಬದಲಾಗಿ ಬಿಡುತ್ತದೋ ಅವರು ನಿರ್ವಾಣ ಸ್ಥಿತಿಯಲ್ಲಿ ಇದ್ದಂತೆಯೇ. ನಿರ್ವಾಣವನ್ನು ಹೊಂದಿದಂತೆಯೇ. ಅವರನ್ನು ಜೀವನ್ಮುಕ್ತನು ಎಂದು ಕೂಡಾ ಹೇಳುತ್ತಾರೆ. ಆದ್ದರಿಂದ ಮುಮುಕ್ಷುಗಳು ಅಂದರೆ ಧ್ಯಾನ ಸಾಧನೆಯನ್ನು ಮಾಡುವವರು ತಮ್ಮ ವರ್ತನೆಯ ಮೇಲೆ ಹೇಳಿದ ರೀತಿಯಲ್ಲಿ ಬದಲಾವಣೆಯನ್ನು ಹೊಂದಿದೆಯೇ? ಇಲ್ಲವೇ? ಎಂದು ನೋಡಿಕೊಳ್ಳಬೇಕು. ಒಂದುವೇಳೆ ಬದಲಾವಣೆಯು ಕಾಣಿಸದೇ ಇದ್ದರೆ ತಾನು ಮಾಡುವ ಸಾಧನೆ ಸರಿಹೋಗಿಲ್ಲವೆಂದು, ಸಾಧನೆಯಲ್ಲಿ ಎಲ್ಲಿಯೋ ಲೋಪವಿದೆಯೆಂದು ತಿಳಿದುಕೊಳ್ಳಬೇಕು. ಆ ಲೋಪವನ್ನು ಸರಿ ಮಾಡಿಕೊಂಡು ಸಾಧನೆಯನ್ನು ಮುಂದುವರಿಸಬೇಕು. ಯಾರಾಗಲಿ ಸರಿ ಕೊನೆಗೆ ಜೀವನ ಲಕ್ಷ್ಯವಾದ ನಿರ್ವಾಣವನ್ನು ಸಾಧಿಸಬೇಕು.

*****



### ಶ್ರೀ ಶಂಕರಾಚಾರ್ಯರು

- ಮನಸ್ಸು, ಬುದ್ಧಿ, ಚಿತ್ತ, ಅಹಂಕಾರವು ಎಂಬ ವೃತ್ತಿಗಳಿಂದ ಕೂಡಿದ ಅಂತಃಕರಣವು ನಾನು ಅಲ್ಲ. ಜ್ಞಾನೇಂದ್ರಿಯಗಳು ನಾನಲ್ಲ, ಪಂಚಭೂತಗಳು ನಾನಲ್ಲ.
- ಪಂಚವಾಯುಗಳು ಅಂದರೆ ಪಂಚಪ್ರಾಣಗಳು ನಾನಲ್ಲ. ಸಪ್ತಧಾತುಗಳು ಅಂದರೆ ಏಳು ಧಾತುಗಳು ನಾನಲ್ಲ. ಪಂಚಕೋಶಗಳು ನಾನಲ್ಲ. ಕರ್ಮೇಂದ್ರಿಯಗಳಾದಂತ ಕೈಗಳು, ಕಾಲುಗಳು, ವಾಕ್ಕು (ಬಾಯಿ), ಮಲದ್ವಾರ, ಮೂತ್ರದ್ವಾರಗಳು ನಾನಲ್ಲ.
- ರಾಗದ್ವೇಷಗಳಾಗಿ, ಲೋಭ ಮೋಹಗಳಾಗಲಿ ನಾನಲ್ಲ. ಮದ ಮಾತ್ಸರ್ಯಗಳು ನಾನಲ್ಲ. ನಾನು ಸರ್ವಾತ್ಮಕನು, ನಿತ್ಯ ಮುಕ್ತನು, ಆದ್ದರಿಂದ ನನಗೆ ಪುರುಷಾರ್ಥಗಳೆಂದು ಹೇಳುವ ಧರ್ಮ, ಅರ್ಥ, ಕಾಮ ಮೋಕ್ಷಗಳೆಂಬವು ಇಲ್ಲವೇ ಇಲ್ಲ.
- ಪುಣ್ಯವಾಗಲಿ, ಪಾಪವಾಗಲಿ ನಾನಲ್ಲ. ಸುಖವಾಗಲಿ, ದುಃಖವಾಗಲಿ, ನಾನು ಅಲ್ಲ. ಮಂತ್ರವಾಗಲಿ, ಪುಣ್ಯಕ್ಷೇತ್ರವಾಗಲಿ ನಾನಲ್ಲ. ವೇದಗಳಾಗಲಿ, ವೇದ ವಿಹಿತಗಳುಳ್ಳ ಯಜ್ಞಗಳಾಗಲಿ ನಾನಲ್ಲ.
- ನನಗೆ (ಆತ್ಮಕ್ಕೆ) ಮರಣವಿಲ್ಲ, ಭಯವೂ ಇಲ್ಲ. ಸ್ತ್ರೀ, ಪುರುಷನು, ನಪುಂಸಕಗಳೆಂಬ ಜಾತಿಬೇಧಗಳಿಲ್ಲ. ನನಗೆ ಹುಟ್ಟು ಇಲ್ಲ, ತಂದೆಯಾಗಲಿ ತಾಯಿಯಾಗಲಿ ಇಲ್ಲ. ಬಂಧುಗಳಾಗಲಿ, ಮಿತ್ರರಾಗಲಿ, ಗುರುವಾಗಲಿ, ಶಿಷ್ಯನಾಗಲಿ ಇಲ್ಲ.
- ಯಾವ ವಿಧವಾದ ವಿಶೇಷಗಳಿಲ್ಲದವನು, ನಿರಾಕಾರನು, ವ್ಯಾಪಕನು, ನಾನು ಸರ್ವ ದೇಶಗಳಲ್ಲಿ, ಸರ್ವ ಕಾಲಗಳಲ್ಲೂ, ಸರ್ವ ವಸ್ತುಗಳಲ್ಲೂ ಇರುವವನು. ನಾನು ಮುಕ್ತನು ಅಲ್ಲ, ಬುದ್ಧನು ಅಲ್ಲ, ನಾನು ಸಂಗವನ್ನು ಉಳ್ಳವನಲ್ಲ, ನಾನು ಕೇವಲ ಜ್ಞಾನಾನಂದವಾದ ಆತ್ಮನು. ಚಿದಾನಂದ ಸ್ವರೂಪನಾದ ಶಿವನೇ ನಾನು, ಶಿವನೇ ನಾನು ಎಂದು ತಿಳಿಸಿದ್ದಾರೆ.

– ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್‌ರವರು

ರೂ 40/-




**ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ**

ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂದರ್ಶಿಸಿ
https: //www.youtube.com/pmckannada • www.meditationeverywhere.org
• www.pssmovement.org

## ಶ್ರೀರಾಮ ಪಬ್ಲಿಕೇಶನ್ಸ್

ಶ್ರೀರಾಮಧಾಮ ಧ್ಯಾನಕೇಂದ್ರ,
ನಾರಾಯಣಪ್ಪ ಗಾರ್ಡನ್, ವೈಟ್ ಫೀಲ್ಡ್, ಬೆಂಗಳೂರು - 560 066
ಸಂಪರ್ಕಿಸಿ : ಹೆಚ್.ಎನ್. ಶ್ರೀನಿವಾಸ / 9449695503
ವಿಜಯಲಕ್ಷ್ಮಿ ಎಸ್.ಎನ್ / 8050082689